ಓಂ ಶ್ರೀ ಗುರು ಬಸವಲಿಂಗಾಯ ನಮಃ
866666

ಕಲ್ಯಾಣ ಕಿರಣ

ಅಕ್ಟೋಬರ್ 2016

ಶರಣರ ನಡೆ ಮುಕ್ತಿಯ ಕಡೆ

ಜಾತಿ ಹೊರ ಹಾಕುವುದು ಲಿಂಗಾಯತ ಧರ್ಮವೇ?


ಅಕ್ಕನ ಅಮರವಾಣಿ ಭಾಗ-34

ಬಯಲ ಭ್ರಮೆ ಕಳೆದಾಗ

ಸ್ವತಂತ್ರ ಧರ್ಮದ ಮಾನ್ಯತೆ



₹-20/-   http://kalyanakirana.over-blog.com/ ಬ್ಲಾಗ್



ಶರಣು ಶರಣಾರ್ಥಿ

ಉಸುರಿನ ಪರಿಮಳವಿರಲು
ಕುಸುಮದ ಹಂಗೇತಕಯ್ಯಾ?
ಕ್ಷಮೆ ದಮೆ ಶಾಂತಿ ಸೈರಣೆಯಿರಲು
ಸಮಾಧಿಯ ಹಂಗೇತಕಯ್ಯಾ?
ಲೋಕವೆ ತಾನಾದ ಬಳಿಕ ಏಕಾಂತದ
ಹಂಗೇತಕಯ್ಯಾ
ಚೆನ್ನಮಲ್ಲಿಕಾರ್ಜುನ ದೇವರ ದೇವಾ.

– ಮಹಾನ್ ಶರಣೆ ಅಕ್ಕ ಮಹಾದೇವಿ

ನವೆಂಬರ್

ಹಬ್ಬ, ಹುಣ್ಣಿಮೆಗಳು

ನ.1 – ಕನ್ನಡ ರಾಜ್ಯೋತ್ಸವ

ನ.14 – ಚನ್ನ ಬಸವೇಶ್ವರ ಲಿಂಗೈಕ್ಯ ದಿನ.

ವಚನ ಪೌರ್ಣಿಮಿ.


ಗುರುನಾನಕ್ ಜಯಂತಿ

ಸಂಪಾದಕೀಯ
ಪೂಜ್ಯ ಶ್ರೀ ಡಾ. ಮಾತೆ ಮಹಾದೇವಿ,
ಪೂಜ್ಯ ಶ್ರೀ ಮಾತೆ ಕಸ್ತೂರಿ ದೇವಿ,
ಪೂಜ್ಯ ಶ್ರೀ ಬಸವಕುಮಾರ ಸ್ವಾಮೀಜಿ,
ಅಕ್ಷರ ಜೋಡಣೆ
ಬಸವ ಚಂದ್ರಿಕಾ
ಪುಟ ವಿನ್ಯಾಸ
ಪುನೀತ್.ಎಂ.ಜಿ.
ಪ್ರಸಾರ ಮೇಲ್ವಿಚಾರಣೆ
ಆರ್.ಎಸ್.ಹೊನ್ನಪ್ಪನವರ್

ಒಂದು ಪ್ರತಿಗೆ: 20 ರೂಪಾಯಿ
ಪಂಚವಾರ್ಷಿಕ ಸದಸ್ಯತ್ವ : 1000 ರೂಪಾಯಿ
ವಾರ್ಷಿಕ ಚಂದಾ : 200 ರೂಪಾಯಿ

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಸಂಪುಟ – 47 ಬಸವ ಶಕೆ 882
ಸಂಚಿಕೆ – 10 ಅಕ್ಟೋಬರ 2016



Kalyana Kirana-R.No.19988/70. Monthly Magzine Edited and published by Pujya kasthuridevi on behalf of Vishva Kalyana Mission chratible trust, Basava Mantapa, 2035, 20th main, 2nd block, Rajajinagar Bangalore -560010.

Ph: 080-23131476. SMS-9945806297.
E-mail: kalyanakirana1970@gmail.com


ಸಂಪಾದಕರ ನುಡಿ

ಮಾತಾಜಿ

ಜಾತಿ ಹೊರ ಹಾಕುವುದು ಲಿಂಗಾಯತ ಧರ್ಮವೇ?



ಒಂದು ದಿವಸ ಚೆನ್ನೈನಿಂದ ಫೋನ್ ಬಂದಿತು. ಒಬ್ಬ ಮಹಿಳೆ ಫೋನ್‌ದಲ್ಲಿ ಮಾತನಾಡಿದಳು. ಆಕೆ ಶಿಕ್ಷಕಿ, ಮಗ ಎಂಜಿನಿಯರ್, ಮಗನಿಗೆ ಮದುವೆ ಮಾಡಬೇಕಾಗಿದೆ. ಚೆನ್ನೈನಲ್ಲಿ ಲಿಂಗಾಯತರು ಅಲ್ಪಸಂಖ್ಯಾತರಾಗಿದ್ದು ಅಲ್ಲಲ್ಲೇ ಚದುರಿದಂತೆ ಇರುವುದರಿಂದ ವಿವಾಹ ಸಂಬಂಧ ಬೆಳೆಸಲು ಒಂದು ಸಂಘವನ್ನು ಮಾಡಿಕೊಂಡಿದ್ದಾರಂತೆ. ಇವರು ಆ ಸಂಘಕ್ಕೆ ಸದಸ್ಯರಾಗಿ ವಿವಾಹ ಸಂಬಂಧಕ್ಕೆ ಹೆಸರನ್ನು ನೋಂದಾಯಿಸಬೇಕೆಂದು ಹೋದರೆ ಸಂಘದ ಪ್ರಮುಖರು, "ನಿಮ್ಮನ್ನು ಲಿಂಗಾಯತ ಜಾತಿಯಿಂದ ಹೊರಹಾಕಲಾಗಿದೆ. ಹೆಸರನ್ನು ನೋಂದಾಯಿಸುವುದಿಲ್ಲ." ಎಂದು ನಿರಾಕರಿಸುತ್ತಿದ್ದಾರೆ. ನಾವೀಗ ಏನು ಮಾಡಬೇಕು?" ಎಂದು ಆ ಶಿಕ್ಷಕಿ ಅತ್ತಳು. ಸಂಘದ ಪ್ರಮುಖರ ದೂರ ಸಂಖ್ಯೆ ಕೊಡಿರಿ ಎಂದು ಕೇಳಿದೆ. ಒಂದು ಸಂಖ್ಯೆ ಕೊಟ್ಟಳು. ಅವರಿಗೆ ಫೋನ್ ಮಾಡಿ ಕೇಳಿದೆ, "ಹೀಗೆ ನೀವು ಮಾಡಿದ್ದು ಸರಿಯೆ? ಯಾರನ್ನು ಬೇಕಾದರೂ ಸ್ವೀಕಾರ ಮಾಡುವ ಧರ್ಮ ನಮ್ಮದು. ಹೀಗಿದ್ದಾಗ ಲಿಂಗಾಯತರನ್ನು ಜಾತಿಯಿಂದ ಹೊರಗೆ ಹಾಕುವುದು ಧರ್ಮ ಸಮ್ಮತವೆ? ಕ್ರೈಸ್ತ, ಇಸ್ಲಾಂ ಧರ್ಮೀಯರು ಹೆಬ್ಬುಲಿಗಳಂತೆ ಬಂದವರನ್ನೆಲ್ಲ ನುಂಗಲು ಹೊಂಚು ಹಾಕುತ್ತಿರುವಾಗ ನೀವು ಇರುವ ಜನರನ್ನು ಕಳೆದುಕೊಳ್ಳಲು ಬಯಸುವುದು ಸರಿಯೆ?" ಎಂದು ಕೇಳಿದೆ. ಆಗ ಸಂಘದ ಪ್ರಮುಖರು, "ಈಕೆಯನ್ನು ಅತ್ತೆ-ಮಾವನನ್ನು ಸರಿಯಾಗಿ ನೋಡಿಕೊಂಡಿಲ್ಲ. ಇವರ ಮಾವನವರೇ ಸಂಘವನ್ನು ಸ್ಥಾಪಿಸಿದ್ದು. ಇವರನ್ನು ಸದಸ್ಯರನ್ನಾಗಿ ತೆಗೆದುಕೊಳ್ಳಬಾರದೆಂದು ಮಾವನವರು ಹೇಳಿರುವುದರಿಂದ ನಾವು ತೆಗೆದುಕೊಳ್ಳುತ್ತಿಲ್ಲ ಎಂದರು. ಕುಟುಂಬದ ಖಾಸಗಿ ಸಮಸ್ಯೆಗಾಗಿ ಲಿಂಗಾಯತರನ್ನು ಜಾತಿಯಿಂದ ಹೊರಗೆ ಹಾಕಿದ್ದೇವೆ ಎಂಬುದು ಎಷ್ಟು ಸಮಂಜಸ? ಅಂಥ ಸಂಕುಚಿತ ಬುದ್ಧಿ ಬೇಡ." ಎಂದು ತಿಳಿಹೇಳಿದೆ. ಲಿಂಗಾಯತ ಧರ್ಮದ ಮರ್ಮವೇ ತಿಳಿಯ ಜನರು ಇವರು. ನಂತರ ಆ ಮಹಿಳೆ ಪುನಃ ಫೋನ್ ಮಾಡಿದಳು, "ನೀವು ಮಾತಾಜಿಯವರಿಗೆ ತಿಳಿಸಿದ್ದೀರಿ. ಅಲ್ಲೀವರೆಗೆ ಏಕೆ ಹೋದಿರಿ?



ಯಾರು ಹೇಳಿದರೂ ನಾವು ನಿಮ್ಮನ್ನು ಒಳಗೆ ತೆಗೆದುಕೊಳ್ಳುವುದಿಲ್ಲ ಎಂದು ಸಂಘದ ಪ್ರಮುಖರು ಹೇಳಿದರಂತೆ. ಕೆಲವು ದಿವಸ ಬಿಟ್ಟು ಆ ಮಹಿಳೆ ಪುನಃ ಫೋನ್ ಮಾಡಿ, "ಇವತ್ತು ನಾನು, ನನ್ನ ಮಗ ಹೋಗಿ ಚರ್ಚಿನಲ್ಲಿ ಹೆಸರು ಬರೆಸಿ ಬಂದೆವು. ನನ್ನ ಮಗನಿಗೆ ಕ್ರಿಶ್ಚಿಯನ್ ಹುಡುಗಿಯನ್ನೇ ಮದುವೆ ಮಾಡುತ್ತೇನೆ." ಎಂದಳು. ಈ ಘಟನೆಯಿಂದ ನನ್ನ ಮನಸ್ಸು ಬಹಳ ನೊಂದಿತು. ಲಿಂಗಾಯತ ಧರ್ಮದ ವಿಚಾರಧಾರೆಯ ಪ್ರಕಾರ ಸಾಮಾಜಿಕ ಧಾರ್ಮಿಕ ಬಹಿಷ್ಕಾರ, ಜಾತಿಯಿಂದ ಹೊರಹಾಕುವುದು ಇವೆಲ್ಲ ಅಸಿಂಧು ದೀಕ್ಷೆ, ಶುದ್ಧೀಕರಣ, ಕರುಣ ಪ್ರಸಾದ ನೀಡಿಕೆ-ಮುಖಾಂತರ ಯಾರನ್ನು ಬೇಕಾದರೂ ಕ್ಷಮಿಸಬಹುದು.

ಬೆಂಗಳೂರು ನಗರದ ಒಂದು ಬಡಾವಣೆಯ ವೀರಶೈವ ಸಂಘಟನೆಯವರು ಬಂದಿದ್ದರು. ಲಿಂಗಾಯತ-ವೀರಶೈವ ಬೇರೆ ಬೇರೆ ಎಂಬ ಚರ್ಚೆ ಶುರುವಾಯ್ತು. ಆಗ ಒಬ್ಬರು ಕೇಳಿದರು, "ಉತ್ತರ ಕರ್ನಾಟಕದಲ್ಲಿ ಕುಂಬಾರರು, ಬಡಿಗೇರು, ಎಸ್‌ಸಿ, ಎಸ್‌ಟಿ ಮುಂತಾದವರೂ ಲಿಂಗ ಕಟ್ಟುತ್ತಾರಲ್ಲ. ಇದು ಸರಿಯೆ?" ಎಂದರು. ಅವರ ಅಜ್ಞಾನಕ್ಕೆ ನಾನು ಮಮ್ಮಲ ಮರುಗಿದೆ.

"ನಮ್ಮ ಧರ್ಮ ಹುಟ್ಟಿದ್ದೇ ಎಲ್ಲರಿಗೂ ಧರ್ಮಸಂಸ್ಕಾರ ಕೊಡಲಿಕ್ಕೆ. ಗುರು ಬಸವಣ್ಣನ ವರಿಗೂ ಮೊದಲು ಎಲ್ಲ ವರ್ಣದವರಿಗೂ ಧಾರ್ಮಿಕ ಸಂಸ್ಕಾರ ಕೊಡಲಿಕ್ಕೆ. ಗುರು ಬಸವಣ್ಣನ ವರಿಗೂ ಮೊದಲು ಎಲ್ಲ ವರ್ಣದವರಿಗೂ ಧಾರ್ಮಿಕ ಸಂಸ್ಕಾರ ದೊರೆಯುತ್ತಿರಲಿಲ್ಲ. ದ್ವಿಜ ವರ್ಣದವರು ಎನ್ನಿಸಿಕೊಂಡ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ ಮಾತ್ರ ದೊರೆಯುತ್ತಿತ್ತು. ನಾಲ್ಕನೆಯದಾದ ಶೂದ್ರರಿಗೆ ಮತ್ತು ಪಂಚಮ ವರ್ಣದ ಅಸ್ಪೃಶ್ಯರಿಗೆ ಧರ್ಮ ಸಂಸ್ಕಾರ ಲಭ್ಯವಿರಲಿಲ್ಲ. ಐದೂ ವರ್ಣಗಳ ಸ್ತ್ರೀಯರಿಗೂ ಧಾರ್ಮಿಕ ಸಂಸ್ಕಾರ ಕೊಡಲ್ಪಡುತ್ತಿರಲಿಲ್ಲ. ಎಲ್ಲರಿಗೂ - ಬ್ರಾಹ್ಮಣರಿಂದ ಭಂಗಿಯವರೆಗೂ, ಎಲ್ಲ ವರ್ಣಗಳ ಮಹಿಳೆಯರಿಗೆ ಧಾರ್ಮಿಕ ಸಂಸ್ಕಾರ ಲಭ್ಯವಾಗಬೇಕೆಂದೇ ಗುರು ಬಸವಣ್ಣನವರು ಹೋರಾಡಿದ್ದು; ಮನೆಯನ್ನು ಬಿಟ್ಟಿದ್ದು. ಇದೇ ಉದ್ದೇಶದಿಂದಲೇ ಲಿಂಗಾಯತ ಧರ್ಮ ಸ್ಥಾಪಿಸಿ, ಇಷ್ಟಲಿಂಗದೀಕ್ಷೆ ಮೂಲಕ ಎಲ್ಲರನ್ನು ಸ್ವಾಗತಿಸಿದ್ದು. ಹೊಸಧರ್ಮ ಸ್ಥಾಪನೆಯ ಹಿಂದಿನ ಕಳಕಳಿಯನ್ನು ಲಿಂಗಾಯತರು ಅರಿಯದೆ ಇದ್ದರೆ ಅದು ಬಹು ವಿಷಾದನೀಯ.

ಅಕ್ಕನ ಅಮರವಾಣಿ ಭಾಗ-34



355. ಕರುಣೆಯ ಕಂದ

ಎನ್ನ ಭಕ್ತಿ ಬಸವಣ್ಣನ ಧರ್ಮ, ಎನ್ನ
ಜ್ಞಾನ ಪ್ರಭುವಿನ ಧರ್ಮ, ಎನ್ನ ಪರಿಣಾಮ
ಚೆನ್ನಬಸವಣ್ಣನ ಧರ್ಮ,
ಈ ಮೂವರು ಒಂದೊಂದ ಕೊಟ್ಟೊಡೆನಗೆ
ಈ ಮೂರು ಭಾವವಾಯಿತ್ತು
ಈ ಮೂರನು ನಿಮ್ಮಲ್ಲಿ ಸಮರ್ಪಿಸಿದ ಬಳಿಕ
ಎನಗಾವ ಜಂಜಡವಿಲ್ಲ
ಚನ್ನಮಲ್ಲಿಕಾರ್ಜುನದೇವನ ದೇವರ
ನೆನಹಿನಲ್ಲಿ ನಿಮ್ಮ ಕರುಣದ ಕಂದನಾಗಿದ್ದೆ
ಕಾಣಾ ಸಂಗನ ಬಸವಣ್ಣ

ಸರ್ವಶಕ್ತನೂ, ನಿರಾಕಾರ, ನಿರಂಜನ ಸ್ವರೂಪನಾದ ದೇವನನ್ನು ನಿಜವಾದ ಸದ್ಭಕ್ತಿಯಿಂದ ಪೂಜಿಸಿ,ಪ್ರಾರ್ಥಿಸಿ,ಧ್ಯಾನಿಸುವುದನ್ನು ಗುರು ಬಸವಣ್ಣನವರಿಂದ ಕಲಿತು ಜೀವನದಲ್ಲಿ ಅಳವಡಿಸಿಕೊಂಡೆ. ಸತ್-ಚಿತ್-ಆನಂದ ನಿತ್ಯಸ್ವರೂಪನಾದ ಪರಮಾತ್ಮನ ಸುಜ್ಞಾನವನ್ನು ಪಡೆಯಲು ಅಲ್ಲಮ ಪ್ರಭುದೇವರಿಂದ ಸಾಧ್ಯವಾಯಿತು. ಇಂಥ ಸತ್ಯ-ಶುದ್ಧವಾದ ಆಚಾರ-ವಿಚಾರಗಳಿಂದ ಕೂಡಿದ ಸತ್ಕ್ರೀಯೆಯ ಪರಿಣಾಮವು ಚನ್ನಬಸವಣ್ಣನವರಿಂದ ಪ್ರಾಪ್ತವಾಯಿತು. ಈ ಮೂವರು ಮಹಾನುಭಾವರು ಕ್ರಮವಾಗಿ ಭಕ್ತಿ, ಜ್ಞಾನ,ಪರಿಣಾಮ(ಸಂತೃಪ್ತಿ)ಗಳನ್ನು ನನಗೆ ಕೊಟ್ಟದ್ದರಿಂದ ಮತ್ತು ಅವರ ಮಾರ್ಗದರ್ಶನದಲ್ಲಿ ನಾನು ಸಾಧಿಸಿದ್ದನ್ನು ನಿಮಗೆ ಸಮರ್ಪಿಸಿದ್ದೇನೆ. ಹಾಗಾಗಿ ಮುಂದೆ ಇದರಿಂದ ನನಗೆ ಮತ್ತೂ ಏನಾದರು ಸಾಧಿಸಬೇಕೆಂಬ ಹಂಬಲವಾಗಲಿ, ಸಾಧಿಸಿಲ್ಲ ಎಂಬ ತವಕವಾಗಲಿ ಇಲ್ಲವಾಗಿದೆ. ಚನ್ನಮಲ್ಲಿಕಾರ್ಜುನದೇವರ ದೇವನ ಸದಾ ನೆನಪಿನಲ್ಲಿದ್ದು ಅವನ ಕರುಣೆಗೆ ಪಾತ್ರಳಾಗಲು ಸಾಧ್ಯವಾದುದು ಬಸವಣ್ಣ, ಪ್ರಭುದೇವ, ಚನ್ನಬಸವಣ್ಣನವರ ಬದುಕಿನ ಅನುಕರಣೆಯಿಂದ ಎಂದು ಅಕ್ಕ ಮಹಾದೇವಿಯವರು ತಮ್ಮ ಬದುಕಿನ ಸಾರ್ಥಕತೆಗಾಗಿ ಶರಣರನ್ನು ಕೃತಜ್ಞತೆಯಿಂದ ಸ್ಮರಿಸಿದ್ದಾರೆ.

356. ನಿಃಶೂನ್ಯ ಭಾವ

ಲಿಂಗಸ್ಥಲವ ಬಲ್ಲೆನೆಂಬ ಪರಬ್ರಹ್ಮಿಗಳು
ನೀವು ಕೇಳಿರೆ ಲಿಂಗಸ್ಥಲ ನಿಃಶೂನ್ಯವಾಯಿತ್ತು
ಸಂಗಮದೇವರ ಬೆನ್ನಲ್ಲಿ
ಜಂಗಮಸ್ಥಲ ಬಲ್ಲೆನೆಂಬ ಪರಬ್ರಹ್ಮಿಗಳು ನೀವು
ಕೇಳಿರೆ ಜಂಗಮಸ್ಥಲ ನಿಃಶೂನ್ಯವಾಯಿತ್ತು
ಪ್ರಭುದೇವರ ಬೆನ್ನಲ್ಲಿ
ಭಕ್ತಿಸ್ಥಲ ಬಲ್ಲೆನೆಂಬ ಪರಬ್ರಹ್ಮಿಗಳು ನೀವು
ಕೇಳಿರೆ ಭಕ್ತಿಸ್ಥಲ ನಿಃಶೂನ್ಯವಾಯಿತ್ತು ಸಂಗನ
ಬಸವರಾಜದೇವರ ಬೆನ್ನಲ್ಲಿ
ಪ್ರಾಣಲಿಂಗಸ್ಥಲ ಬಲ್ಲೆನೆಂಬ ಪರಬ್ರಹ್ಮಿಗಳು
ನೀವು ಕೇಳಿರೆ ಪ್ರಾಣಲಿಂಗಸ್ಥಲ ನಿಃಶೂನ್ಯ
ವಾಯಿತ್ತು ಸಿದ್ಧರಾಮೇಶ್ವರದೇವರ ಬೆನ್ನಲ್ಲಿ
ಪ್ರಸಾದಸ್ಥಲವ ಬಲ್ಲೆನೆಂಬ ಪರಬ್ರಹ್ಮಿಗಳು
ನೀವು ಕೇಳಿರೆ ಪ್ರಸಾದಿಸ್ಥಲ ನಿಃಶೂನ್ಯವಾಯಿತ್ತು
ಚಿಕ್ಕದಣ್ಣಾಯಕರ ಬೆನ್ನಲ್ಲಿ
ಐಕ್ಯಸ್ಥಲ ಬಲ್ಲೆನೆಂಬ ಪರಬ್ರಹ್ಮಿಗಳು ನೀವು
ಕೇಳಿರೆ ಐಕ್ಯಸ್ಥಲ ನಿಃಶೂನ್ಯವಾಯಿತ್ತು
ಅಜಗಣ್ಣದೇವರ ಬೆನ್ನಲ್ಲಿ
ಇಂತೆನ್ನ ಷಟಸ್ಥಲಂಗಳು ಒಬ್ಬೊಬ್ಬರ ಬೆನ್ನಲ್ಲಿ
ನಿಃಶೂನ್ಯವಾದವು ಎನಗಿನ್ನಾವ ಕಿಂಚಿತ್ತು
ಸ್ಥಲವೂ ಇಲ್ಲವಯ್ಯ
ಚೆನ್ನಮಲ್ಲಿಕಾರ್ಜುನದೇವರ ದೇವಾ

ಅಕ್ಕನವರನ್ನು, ಪರಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಂಡಿದ್ದೇವೆ ಎಂದು ತಿಳಿದ ಭ್ರಮಿತರು ಹೀಗೆ ಕೇಳಿರಬಹುದು. 'ನೀವು ಸಾಧನಾಪಥದ ಯಾವ ಸ್ಥಲದಲ್ಲಿದ್ದೀರಿ. ಇನ್ನು ಷಟಸ್ಥಲಗಳ ಹಂತಗಳನ್ನು ತಲುಪಿಲ್ಲವೆ? ಮತ್ತೆ ಬೇರೆ ಯಾವುದಾದರೂ ಸಾಧನೆ ಮಾಡುತ್ತಿದ್ದಿರಾ?' ಎಂದು. ಅದಕ್ಕೆ ಅಕ್ಕನವರು ಈ ರೀತಿ ಉತ್ತರಿಸುತ್ತಿದ್ದಾರೆ. ಲಿಂಗಸ್ಥಲದ ಮರ್ಮವನ್ನು ತಿಳಿದವರೆಂದು ಭಾವಿಸಿದ ನೀವು ಕೇಳಿರಿ. ನೀವು ತಿಳಿಯುವ ಮೊದಲು ಲಿಂಗಸ್ಥಲದ ಜ್ಞಾನ ಪರಮಾತ್ಮನಲ್ಲಿ ಅಡಗಿತ್ತು. ಅದರಂತೆ ಜಂಗಮಸ್ಥಲ ಅಂದರೆ ಸಾಧಕರಿಗೆ, ಮುಮುಕ್ಷುಗಳಿಗೆ ನಿಜಜ್ಞಾನವನ್ನು ಭೋದೆ ಮಾಡುತ್ತಾ, ಸಾಧನೆಗೆ ಮಾರ್ಗದರ್ಶಕ ಗುರುವಾಗಿ ಮಂದಮಾರುತದಂತೆ ಸಂಚರಿಸುವ ಜ್ಞಾನಿ. ಇಂಥ ಜಂಗಮಸ್ಥಲದ ಸಿದ್ಧಿಗೆ ಹೆಸರಾದ ಅಲ್ಲಮಪ್ರಭುದೇವರಲ್ಲಿ ಸಾಕ್ಷಾತ್ಕಾರವಾಗಿ ಜಗತ್ತಿಗೆ ಗೋಚರವಾಗಿದೆ. ಭಕ್ತಿಸ್ಥಲವು ಜಗತ್ಕರ್ತ ಪರಮಾತ್ಮನನ್ನು ಸದ್ಭಕ್ತಿಯಿಂದ ಪೂಜಿಸುವ ಸದಾಚಾರವನ್ನು ಆಚರಿಸಿ ತೋರಿದ ಗುರು ಬಸವಣ್ಣನವರಲ್ಲಿ ಲೀನವಾಗಿದೆ. ಪ್ರಾಣಲಿಂಗಾನುಸಂಧಾನದಲ್ಲಿ ಬಲ್ಲಿದರಾದ ಶ್ರೀ ಸಿದ್ಧರಾಮೇಶ್ವರದೇವರಲ್ಲಿ ಪ್ರಾಣಲಿಂಗಸ್ಥಲವು ಕೈವಶವಾಗಿದೆ. ಅನುಭವ ಮಂಟಪದಲ್ಲಿ ಪ್ರತಿನಿತ್ಯ-ಪ್ರತಿಕ್ಷಣವೂ ಗುರುಲಿಂಗಜಂಗಮರ ತ್ರಿವಿಧ ಪ್ರಸಾದ ಸ್ವೀಕರಿಸುತ್ತಾ ಬೆಳೆದ ಚಿಕ್ಕದಣ್ಣಾಯಕ(ಚನ್ನಬಸವಣ್ಣ)ರಲ್ಲಿ ಪ್ರಸಾದಸ್ಥಲವು ಕರಗತವಾಗಿದೆ. ಇನ್ನು ಐಕ್ಯಸ್ಥಲವನ್ನು ತಲುಪಿದ್ದೇವೆ ಎಂದು ಭಾವಿಸಿದ ನೀವು ಕೇಳಿರಿ. ಇದಾಗಲೇ ಅಜಗಣ್ಣತಂದೆಯವರಲ್ಲಿ ಅಳವಟ್ಟು ಅವರು ಅದರಲ್ಲಿ ಸಮರಸ ಹೊಂದಿದ್ದಾರೆ. ಹೀಗೆ ಪ್ರತಿಯೊಂದು ಸ್ಥಲಕ್ಕೂ ಒಬ್ಬೊಬ್ಬರು ವಾರಸುದಾರರಾಗಿ ಆ ಸ್ಥಲದ ಅನುಭೂತಿಯನ್ನು ಅನುಭವಿಸುತ್ತಾ


ಸಾಧಕರಿಗೂ ಮಾರ್ಗದರ್ಶನ ಮಾಡುತ್ತಾ ಕೀರ್ತಿಭಾಜನರಾಗಿದ್ದಾರೆ. ಜಗತ್ತಿಗೂ ಮಾದರಿಯಾಗಿದ್ದಾರೆ. ಹೀಗಾಗಿ ಸಾಧಿಸಲು ನನಗೆ ಬೇರೆ ಯಾವ ಹೊಸ ಸ್ಥಲಗಳೂ ಇಲ್ಲ ಎಂದು ಅಕ್ಕ ಮಹಾದೇವಿಯವರು ಮಾರ್ಮಿಕವಾಗಿ ಉತ್ತರಿಸಿದ್ದಾರೆ. ಅಲ್ಲದೆ ಬೇರೆಯವರು ಸಾಧಿಸದೆ ಇರುವುದನ್ನು ನಾವು ಸಾಧಿಸಿದ್ದೇವೆ ಅಥವಾ ಸಾಧಿಸುತ್ತಿದ್ದೇವೆ ಎಂಬ ಅಹಂಕಾರ-ಭ್ರಮೆ ಸಾಧಕರ ವ್ಯಕ್ತಿತ್ವಕ್ಕೆ ಮಾರಕ ಎಂಬ ಬೋಧೆ ಇಲ್ಲಿದೆ.


358.ಗುರು ಬಸವಣ್ಣನವರ ಪಾದಕ್ಕೆ ನಮೋನಮಃ

ಶಿವಾ ಶಿವಾ ಆದಿ ಅನಾದಿಗಳೆಂಬರೆಡಿಲ್ಲದ
ನಿರವಯ ಶಿವ,
ನಿಮ್ಮ ನಿಜನನಾರಯ್ಯ ಬಲ್ಲವರು?
ವೇದಗಳಿಂಗಭೇದ್ಯನು, ಶಾಸ್ತ್ರಗಳಿಂಗಸಾಧ್ಯನು,
ಪುರಾಣಕ್ಕಮ್ಯನು ಆಗಮಕ್ಕೆ ಅಗೋಚರನು,
ತರ್ಕಕ್ಕೆ ಅತರ್ಕ್ಯನು
ವಾಙ್ಮನಾತೀತವಾಗಿಪ್ಪ ಪರಶಿವ ಲಿಂಗವನು
ಕೆಲಂಬರು ಸಕಲನೆಂಬರು, ಕೆಲಂಬರು
ನಿಃಕಲನೆಂಬರು
ಕೆಲಂಬರು ಸೂಕ್ಷ್ಮನೆಂಬರು, ಕೆಲಂಬರು
ಸ್ಥೂಲನೆಂಬರು,
ಈ ಬಗೆಯ ಭಾವದಿಂದ ಹರಿ ಬ್ರಹ್ಮ ಇಂದ್ರ
ಚಂದ್ರ ರವಿ ಕಾಲ ಕಾಮ ದಕ್ಷ ದೇವ
ದಾನವ ಮಾನವರೆಲ್ಲರೂ ಕಾಣಲರಿಯದೆ
ಭವಭಾರಿಗಳಾದರು
ಈ ಪರಿಯಲ್ಲಿ ಭವಭಾರಿಗಳಾಗಿ ಬಯಲಾಗಿ
ಹೋಗಬಾರದೆಂದು ನಮ್ಮ ಬಸವಣ್ಣನು
ಜಗದ್ಧಿತಾರ್ಥಕ್ಕಾಗಿ ಮರ್ತ್ಯಕ್ಕೆ ಅವತರಿಸಿ
ಶರಣ ಮಾರ್ಗವನರುಹುವುದಕ್ಕೆ
ಬಾವನ್ನ ವಿವರವನ್ನೊಳಕೊಂಡು
ಚರಿಸಿದನದೆಂತೆಂದೊಡೆ-
ಗುರು ಕಾರುಣ್ಯವೇದ್ಯನು, ವಿಭೂತಿ ರುದ್ರಾಕ್ಷಿ
ಧಾರಕನು, ಪಂಚಾಕ್ಷರಿ ಭಾಷಾ ಸಮೇತನು,
ಲಿಂಗಾಂಗ ಸಂಬಂಧಿ, ನಿತ್ಯ ಲಿಂಗಾರ್ಚಕನು,
ಅರ್ಪಿತದಲ್ಲಿ ಅವಧಾನಿ, ಪಾದೋದಕ
ಪ್ರಸಾದ ಗ್ರಾಹಕನು, ಗುರು ಭಕ್ತಿ ಸಂಪನ್ನನು,
ಏಕಲಿಂಗ ನಿಷ್ಠಾಪರನು, ಚರಲಿಂಗ
ಲೋಲುಪ್ತನು, ಶರಣ ಸಂಗಮೈಶ್ವರ್ಯನು,
ತ್ರಿವಿಧಕ್ಕಾಯತನು
ತ್ರಿಕರಣ ಶುದ್ಧನು, ತ್ರಿವಿಧ ಲಿಂಗಾಂಗ
ಸಂಬಂಧಿ, ಅನ್ಯದೈವ ಸ್ಮರಣೆಯ ಹೊದ್ದ,
ಭವಿ ಸಂಗವ ಮಾಡ,
ಭವಿಪಾಕವ ಕೊಳ್ಳ, ಪರಸ್ತ್ರೀಯ ಬೆರಸ,
ಪರಧನವನೊಲ್ಲ, ಸ್ತುತಿ ನಿಂದೆಗಳ ಹೊದ್ದ,
ಆತ್ಮಸ್ತುತಿಯ ಮಾಡ, ಪರನಿಂದೆಯನಾಡ,
ಅನೃತವ ನುಡಿಯ, ಹಿಂಸೆಯ ಮಾಡ,
ತಾಮಸ ಭಕ್ತಿಯ ಸಂಗವ ಮಾಡ,
ಸದಾಚಾರ ಸಂಪನ್ನ, ಗುರು-ಲಿಂಗ-
ಜಂಗಮಕ್ಕೆ ಅರ್ಥಪ್ರಾಣಾಭಿಮಾನ
ಮುಂತಾದ
ತ್ರಿವಿಧವನರ್ಪಿಸುವ, ಪಾದೋದಕ-ಪ್ರಸಾದ
ಮುಂತಾಗಿ ಭೋಗಿಸುವ, ಜಂಗಮ ನಿಂದೆ-
ಯ ಸೈರಿಸ, ಪ್ರಸಾದ ನಿಂದೆಯ ಕೇಳ,
ಅನ್ಯರ ಹಾಸ್ಯಗೈಯ,
ಪಾತ್ರಾಪಾತ್ರವನರಿದೀವ, ಚತುರ್ವಿಧ
ಪದವಿಯ ಹಾರ, ಅರಿಷಡ್ವರ್ಗಕ್ಕೆ ಅಳುಕ,
ಕುಲಾದಿ ಮದಂಗಳ ಬಗೆಗೊಳ್ಳ, ಕುತ್ಸಿತ
ಕುಹಕಕ್ಕೆ ಸೇರ,
ದ್ವೈತಾದ್ವೈತವ ನುಡಿವವನಲ್ಲ, ಸಂಕಲ್ಪ-
ವಿಕಲ್ಪವ ಮಾಡುವವನಲ್ಲ,
ಕಾಲೋಚಿತವ ಬಲ್ಲ, ಕ್ರಮಯುಕ್ತನಾಗಿ
ಷಟಸ್ಥಲ ಸಂಬಂಧಿ,
ಸವಾಂಗಲಿಂಗಿ, ದಾಸೋಹ ಸಂಪನ್ನ,
ದಯಾಭರಿತ,
ನ್ಯಾಯನಿಷ್ಠುರ, ನುಡಿದಂತೆ ನಡೆವ,
ಮಾಟಕೂಟಗಳಂಗಳ ಅನುಸಂಧಾನಿ,
ಮರೆವಿಲ್ಲದ ಮಹಾಜ್ಞಾನಿ,
ಶಿವಶರಣರನುಭಾವಿ, ಕರ್ಮದ ಬಟ್ಟೆಯ
ಮೆಟ್ಟ,
ಕಲುಷ ಕಾರ್ಪಣ್ಯವ ಮುಟ್ಟ, ಕಾಯಕ್ಕಲ್ಲದೆ
ಸಲ್ಲ,
ದಾಸೋಹ ಭಾವ ಸಂಪನ್ನ, ಕಾಯದ
ಕಳವಳಕ್ಕಂಜ,
ಶಿವಧರ್ಮದ ಪುಂಜ, ಇಂತಿ ಐವತ್ತೆರಡು
ವಿಧದಲ್ಲಿ ನಿಪುಣಣಾಗಿ ಮೆರೆವ
ನಮ್ಮ ಬಸವಣ್ಣನು. ಆ ಬಸವಣ್ಣನ
ಶ್ರೀಪಾದಕ್ಕೆ ನಾನು ಅಹೋರಾತ್ರಿಯಲ್ಲಿ
ನಮೋನಮಃ ಎಂದು ಬದುಕುದೆನು ಕಾಣಾ
ಚನ್ನಮಲ್ಲಿಕಾರ್ಜುನದೇವರ ದೇವಾ

ಮುಂದುವರಿಯುವುದು...

ಬಸವ ಜ್ಯೋತಿ ಮಂಗಳ ಗೀತೆ !!!





ಬೆಳಗಲಿ ಬೆಳಗಲಿ
ಬಸವ ಜ್ಯೋತಿ ಬೆಳಗಲಿ
ಬೆಳೆಸಲಿ ಬೆಳೆಸಲಿ
ವಿಶ್ವ ಪ್ರೇಮ ಬೆಳೆಸಲಿ ॥ ಪ ॥

ಮೇಲು ಕೀಳೆಂಬ ಅಸಮತೆ ಅಳಿಯಲಿ
ಎಲ್ಲರು ಸಮರೆಂಬ ಸದ್ಭಾವ ಮೂಡಲಿ
ಬಲ್ಲಿದ ಬಡವ ಭೇದ ಭಾವ ತೊಲಗಲಿ
ಕ್ಷುಲ್ಲಕ ಬುದ್ಧಿಯ ಕತ್ತಲೆಯು ಹರಿಯಲಿ ॥ 1 ॥



'ಕಾಯಕವೇ ಕೈಲಾಸ' ಮಂತ್ರವು ನಲಿಯಲಿ
'ದಯವೆ ಧರ್ಮದ ಮೂಲ' ಭಾವವು ಬೆಳೆಯಲಿ
ಶಾಂತಿ ಸಮತೆಗಳು ಲೋಕದಿ ನೆಲೆಸಲಿ
ಈ ಇಳೆಯೊಳಗೆ ನಾಕವ ಇಳಿಸಲಿ ॥ 2 ॥

ಕರ್ತನ ಮಹಿಮೆಯ ಸರ್ವರು ಹಾಡಲಿ
ಮರ್ತ್ಯದ ಬಾಳೊಳು ಎಲ್ಲರು ಸಲ್ಲಲಿ
ಗುರು ಬಸವಣ್ಣನ ವಚನಾಮೃತದಲಿ
ಪರಮಾನಂದವ ಮನುಕುಲ ಪಡೆಯಲಿ ॥ 3 ॥



ನತ ಜನ ರಕ್ಷಕ ಗುರು ಬಸವಗೆ ನಮೋ
ಪತಿತೋದ್ಧಾರಕ ಮಹಾ ಕರುಣೆಗೆ ನಮೋ
ಶ್ರೀ ಲಿಂಗದೇವನ ಕಂದಗೆ ನಮೊ ನಮೋ
ಮಂಗಲಮಯ ವಿಶ್ವಜ್ಯೋತಿಗೆ ನಮೊ ನಮೋ ॥ 4 ॥

ಬೆಳಗಲಿ ಬೆಳಗಲಿ
ಬಸವ ಜ್ಯೋತಿ ಬೆಳಗಲಿ
ಬೆಳೆಸಲಿ ಬೆಳೆಸಲಿ
ವಿಶ್ವ ಪ್ರೇಮ ಬೆಳೆಸಲಿ ॥ ಪ ॥

* ಲೇಖಕರು: - ಪೂಜ್ಯಶ್ರೀ ಮಹಾಜಗದ್ಗುರು ಡಾ. ಮಾತೆ ಮಹಾದೇವಿ

ಮಹಾನ್ ಶರಣ

ಪ್ರವಚನ ಪಿತಾಮಹ
ಲಿಂಗಾನಂದ ಗುರೂಜಿ

ದಿಲೀಪ್ ಬಿ.ಲಿಂಗಾಯತ್



ದಾರ್ಶನಿಕ ಜೀವನ ಒಂದು ಗಾಳಿಪಟ, ಗಾಳಿಪಟವು ಬಾನಿನಲ್ಲಿ ಹಾರಾಡುತ್ತಿದ್ದರೂ, ಹಿಡಿದ ಕೈ ಕಾಣದು. ಹಾಗೆ ಪೂಜ್ಯ ಲಿಂಗಾನಂದ ಗುರೂಜಿಯವರ ಜೀವನ ಸಹ. ಅವರ ಬದುಕಿನ ಗಾಳಿಪಟವನ್ನು ಕರುಣೆಯ ಸೂತ್ರ ಹಿಡಿದು ಆಡಿಸಿದ ಹಸ್ತ ಗುರು ಬಸವಣ್ಣನವರದು. ಇಲ್ಲದಿದ್ದರೆ ಕಮ್ಯೂನಿಸಮ್ ನ ಕಾಮ್ರೇಡ್ ಸಂಗಮೇಶ ಬಸವ ಧರ್ಮದ ವೀರಸೇನಾನಿ, ಬಸವಧರ್ಮದ ಪುನರುಸ್ಥಾಪಕರು, ವಿಶ್ವದ ಪ್ರಪ್ರಥಮ ಮಹಿಳಾ ಜಗದ್ಗುರು ಪೀಠ ಸ್ಥಾಪಕರು, ಪ್ರವಚನ ಪಿತಾಮಹ, ಪ್ರವಚನ ಪುರುಷ, ಬಸವಧರ್ಮದ ಮಹಾಜಗದ್ಗುರು ಪೀಠದ ಪ್ರಥಮ ಪೀಠಾಧ್ಯಕ್ಷರಾಗಲು ಸಾಧ್ಯವಿರಲಿಲ್ಲ. ಗುರು ಬಸವಣ್ಣನವರಿಂದ ಲಿಂಗಾನಂದರ ಆಯ್ಕೆಯ ಪವಾಡ ನಡೆಯದೆ ಇದ್ದರೆ ಮೂಲ ಬಸವ ತತ್ವದಿಂದ ದೂರ ಇರುತ್ತಿತ್ತು ಈ ಸಮಾಜ. ಪಟ್ಟಣಕ್ಕೆ ಪಂಚ ರಾತ್ರಿಯಂತೆ, ಹಳ್ಳಿಗೆ ಏಕ ರಾತ್ರಿಯಂತೆ ಸಂಚರಿಸಿ ಬಸವ ತತ್ವ ಪ್ರಚಾರ ಮಾಡಿದರು. ಪೂಜ್ಯ ಲಿಂಗಾನಂದ ಗುರೂಜಿ ಅವರು 15.9.1931ರಂದು ವಿಜಯಪುರ ಜಿಲ್ಲೆಯ ಮಣಿಗವಳ್ಳಿಯಲ್ಲಿ ಜನಿಸಿ ಆನರ್ಸ ಪದವಿಧರರಾಗಿ ಗುರು ಬಸವಣ್ಣನವರ ದಿವ್ಯ ಪ್ರೇರಣೆಯಿಂದ 19.11.1956ರಂದು ಜ್ಞಾನ ಸನ್ಯಾಸತ್ವ ಸ್ವೀಕರಿಸಿದರು.

ವಿದ್ಯುಕ್ತವಾಗಿ ಜಂಗಮ ದೀಕ್ಷೆಯನ್ನು 7.8.1961ರಂದು ಸುತ್ತೂರು ಮಠದ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರಿಂದ ಸ್ವೀಕರಿಸಿದರು. ಆ ಕಾಲದಲ್ಲಿ ಬಸವ ತತ್ವ ಪ್ರಸಾರಮಾಡಲು ಪಟ್ಟ ಕಷ್ಟಗಳು ಹೆಚ್ಚು. ಪೆಟ್ಟಿಗೆಯಲ್ಲಿ ಪ್ರವಚನ ಪುಸ್ತಕಗಳನ್ನು ಇಟ್ಟು-ಕೊಂಡು ಬರಿ ಕಾಲಿನಲ್ಲಿ ನಡೆದು ಜನರಿಗೆ ಜ್ಞಾನದ ಅಮೃತವನ್ನು ಉಣಿಸುತಿದ್ದರು. ಧರ್ಮದೆಡೆಗೆ ಜನ ಬರದಿದ್ದಾಗ ಧರ್ಮವನ್ನೇ ಜನರ ಬಾಗಿಲಿಗೆ ತೆಗೆದುಕೊಂಡು ಹೋಗ ಬೇಕೆಂದು ಪಣತೊಟ್ಟರು. ಪ್ರವಚನ ಮುಖಾಂತರ ಜಾತೀಯತೆ, ಮೂಢಾಚಾರ, ಕಂದಾಚಾರ ಟೀಕಿಸಿ ಜನರ ಮನ ಪರಿವರ್ತನೆ ಮಾಡುತಿದ್ದರು.

ಮಾತಾಜಿಯವರು ಲಿಂಗಾನಂದ ಗುರೂಜಿಯವರಿಗೆ ಹೆಗಲುಕೊಟ್ಟು ನಿಂತರು. ಜಗತ್ತಿನಲ್ಲಿ ಮಹಿಳೆಯು ಪುರುಷರಷ್ಟೆ ಪ್ರಭಾವಶಾಲಿಯಾಗಿ, ಧರ್ಮಗುರುವಾಗಿ ವಿರಾಜಿಸಬಲ್ಲಳು, ಜಗದ್ಗುರುವಾಗಿ ಧರ್ಮ ಪ್ರಚಾರ ಮಾಡಬಲ್ಲಳು ಎಂದು ಮಹಿಳಾ ಜಗದ್ಗುರು ಪೀಠ ಸ್ಥಾಪಿಸಿದರು. ದೇಶ ಮತ್ತು ಧರ್ಮ ರಕ್ಷಣೆಯಾಗಬೇಕು ಹಾಗೂ ಯುವಶಕ್ತಿಯನ್ನು ದುರ್ಗುಣಗಳಿಂದ ರಕ್ಷಿಸಲು ರಾಷ್ಟ್ರೀಯ ಬಸವ ದಳ ಸ್ಥಾಪನೆ ಮಾಡಿದರು. ಇದು ದೇಶ ವಿದೇಶದಲ್ಲಿ ಬಸವ ತತ್ವ ಪ್ರಚಾರ ಮಾಡುತ್ತಿದೆ. 30.6.1995 ರಂದು ಉರಿಯುಂಡ ಕರ್ಪೂರದಂತೆ ಪೂಜ್ಯರು ಲಿಂಗೈಕ್ಯರಾಗುತ್ತಾರೆ.

ಬದುಕು ಬರವಣಿಗೆ

ಬಯಲ ಭ್ರಮೆ ಕಳೆದಾಗ

ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮೀಜಿ



ಮಾನವನ ಬದುಕು ಬಹಳ ಅರ್ಥಪೂರ್ಣ. ಅದು ಅರ್ಥಪೂರ್ಣವಾಗುವುದು ಅವನು ಆಚರಿಸುವ ಆಚರಣೆ, ನಂಬಿಕೆ, ಭಕ್ತಿ ಮುಂತಾದವುಗಳಿಂದ. ಬದುಕಿನ ಅನೇಕ ಸಂದರ್ಭಗಳಲ್ಲಿ ದಾರಿತೆ-ೂೀರದೆ, ದಿಕ್ಕುತಪ್ಪಿದಂತಾಗುತ್ತಾನೆ. ಅಂತಹ ಸಂದರ್ಭಗಳಲ್ಲಿ ಅವನಿಗೆ ದಾರಿದೀಪವಾಗುವುದು ಶರಣರ ಅಮೃತ ವಚನಗಳು. ಇವು ಬಹಳ ಶಕ್ತಿಶಾಲಿ ಮತ್ತು (ಪ್ರಾಕ್ಟಿಕಲ್) ಪ್ರಾಯೋಗಿಕ ರೂಪದಿಂದ ಸಿದ್ಧವಾದ ಸಂದೇಶಗಳಾಗಿವೆ. ನಾವು ಮಾಡುವ ಪ್ರತಿಯೊಂದು ಕ್ರಿಯೆ, ಆಚರಣೆ-ಯ ಹೇಗಿರಬೇಕೆಂಬುದು ಇಲ್ಲಿ ನಡೆಜಂಗಮ ಅಲ್ಲಮಪ್ರಭುದೇವರು ಪ್ರಸ್ಥಾಪಿಸುತ್ತಾರೆ.

ಮಾಡುವ ಮಾಟದಿಂದವೆ ಬೇರೊಂದನರಿಯಬೇಕು, ಅರಿವಿಂಗೆ ನೆಮ್ಮುಗೆ ಒಡಮೂಡಬೇಕು, ಅರಿವಿಂಗೆ ನೆಮ್ಮುಗೆ ಒಡಮೂಡಿದ ಬಳಿಕ ಬಯಲ ಭ್ರಮೆಯ ಕಳೆದು ನಮ್ಮ ಗುಹೇಶ್ವರಲಿಂಗದಲ್ಲಿ ನಿಜಪದವನ್ನೈದುವುದು !

ಮಾಡುವ ಮಾಟದಲ್ಲಿ ಅನೇಕ ಅರ್ಥಗಳನ್ನು ಕಾಣಬಹುದು. ನೇರವಾಗಿ ಕೆಲವೊಂದು ಅರ್ಥಗಳು ಗೋಚರವಾದರೆ, ಮಾಟದ ಹಿಂದೆ ಬೇರೊಂದನ್ನೂ ಸಹ ನಾವು ತಿಳಿಯಬಹುದು. ತಿಳಿಯಬೇಕು. ಅರಿಯಬೇಕು. ಹೊರಗಿನ ಕ್ರಿಯೆಗಳು ಲೌಕಿಕ ಮತ್ತು ಪಾರಮಾರ್ಥಿಕ ಒಂದೇ ರೂಪದಲ್ಲಿದ್ದರೂ ಅದರ ಹಿಂದಿನ ಅರ್ಥ ಭಾವ ಬೇರೆಂಬುದು ಚಿಂತನೆ.

ಆಟ, ಪಾಠ, ಮಾಟ, ನೋಟ, ಕೂಟ ಇವು ಹಂತಗಳು. ಮೊದಲಿಗೆ ಬದುಕು ಒಂದು ಆಟದಂತೆ. ಈ ಬದುಕಿನಿಂದ ಒಂದು ಪಾಠವನ್ನು ಕಲಿಯುತ್ತೇವೆ. ಇದು ಕೇವಲ ಒಂದು ಕ್ರಿಯೆಯಾಗದೆ, ಮಾಟವಾಗಬೇಕು. ಮಾಟ ಎಂದರೆ ಒಂದು ಡಿಸೈನ್, ಮಾಡೆಲ್ ಆಗಬೇಕು. ಕೇವಲ ಉಂಡುಟ್ಟು ಬಾಳುವುದಾಗದೆ ಆದರ್ಶಗಳ ಬದುಕು, ದೇವನನ್ನೊಲಿಸುವ ಬದುಕು ಅದಾಗಬೇಕು. ಬದುಕು ಒಂದು ಮಾಟವಾದಾಗ ಅದನ್ನು ಎಲ್ಲರೂ ನೋಡುವಂತಾಗುತ್ತದೆ. ಅದರಲ್ಲಿ ದೈವೀ ಶಕ್ತಿಯ ಅವತೀರ್ಣ ಕಾಣುತ್ತೇವೆ. ಕೊನೆಯಲ್ಲಿ ಅದು ಕೂಟವಾಗಿ ಅಂ-ದರೆ ದೇವರನ್ನು ಸೇರುವ ಕೂಟ, ಜೀವಾತ್ಮ ಪರಮಾತ್ಮರ ಸಮ್ಮಿಲನ ವಾಗುತ್ತದೆ. ಹೀಗೆ ಆಟದಿಂದ ಪ್ರಾರಂಭವಾದದ್ದು ಎಚ್ಚರಗಳ, ಪ್ರಯತ್ನಗಳ, ಶರಣಾಗತಿ ಮುಂತಾದವುಗಳ ಸಂಚಯದೊಂದಿಗೆ ಅದು ಸಾಗಿ ಕೂಟದಲ್ಲಿ ಪರ್ಯಾವಸಾನವಾಗುತ್ತದೆ.

ಈ ಸುದೀರ್ಘ ಪ್ರಯಾಣದಲ್ಲಿ ಅರಿವು ಒಡಮೂಡಬೇಕು. ಪ್ರತಿಯೊಂದು ಕ್ರಿಯಯ ಹಿಂದೆ ಒಂದು ಜ್ಞಾನವಿದ್ದಂತೆ, ಜ್ಞಾನ ಅನುಭವ ವೇದ್ಯವಾದಾಗ ಅದು ಅರಿವಾಗುತ್ತದೆ. ಇಂತಹ ಅರಿವು ಅದರೊಂದಿಗೆ ನಾವು ಮಾಟುವ ಮಾಟ, ಅರಿವು ಇವುಗಳ ಬಗ್ಗೆ ನಂಬಿಕೆ ಮೂಡಬೇಕು. ಒಡಮೂಡಬೇಕೆಂದು ಪ್ರಭುದೇವರು ಹೇಳುತ್ತಾರೆ. ಬೀಜದಲ್ಲಿ ಮೊಳಕೆ ತಲೆದೋರುವಂತೆ ನಂಬಿಕೆ ಒಡಮೂಡಬೇಕು. ಹಳೆಯ ನಂಬಿಕೆಗಳೆಂಬ ಬೀಜಗಳು ಒಡೆದು, ಅರಿವುಳ್ಳ ನಂಬಿಕೆ ಒಡಮೂಡಬೇಕು. ಆಗ ಮಾತ್ರ ನಾವು ನಿಜಪದವನ್ನೈದಲು ಸಾಧ್ಯ. ಗುಹೇಶ್ವರಲಿಂಗದಲ್ಲಿ ಒಂದಾಗಲು ಸಾಧ್ಯ. ಹೀಗೆ ಅರಿವು, ನಂಬಿಕೆ ಒಡಮೂಡಲು ಅನೇಕ ತೊಂದರೆಗಳಲ್ಲಿ ಪ್ರಮುಖವಾದುದು. ಬಯಲ ಭ್ರಮೆ.

ಸಾಮಾನ್ಯವಾಗಿ ಇಂದಿನವರೆಗೂ ಪ್ರಚಲಿತವಿರುವ ಆಧ್ಯಾತ್ಮ, ಧಾರ್ಮಿಕ ಕ್ಷೇತ್ರ ಭ್ರಮಾಲೋಕದಲ್ಲಿ ಬಾಳುತ್ತಿದೆ. ದೇವರನ್ನು ಪ್ರಾರ್ಥಿಸಿರಿ ಎಂದ ತಕ್ಷಣ, ಕಣ್ಣು ಮುಚ್ಚಿ ಪ್ರಾರ್ಥಿಸುತ್ತೇವೆ. ಯಾವುದೋ ಲೋಕದಲ್ಲಿ, ಮೇಲಿನಿಂದ, ಅಂತರಂಗದ ಒಳಗಿನಿಂದ ಹೀಗೆ ಎಲ್ಲಿಂದಲೋ ದೇವರು ಕಾಣುವನೇನೋ, ಬಂದು ಅನುಗ್ರಹಿಸುವನೇನೋ ಎಂದು ಕಲ್ಪನೆಯ ಜಗತ್ತಿನಲ್ಲಿ ಬಾಳುವವರನ್ನು ಕಾಣುತ್ತೇವೆ.

ಆದರೆ, ನಿಜ ಆಧ್ಯಾತ್ಮ, ಶರಣರ ದಾರಿ ಹೀಗೆ ಹೇಳುವುದಿಲ್ಲ. ತನ್ನ ಭ್ರಮೆಯನ್ನು ಕಳೆದು ಸಾಧಿಸಬೇಕು. ಅಕ್ಕಮಹಾದೇವಿ ಹೇಳುವಂತೆ ನಾಹಂ ಭ್ರಮೆ, ಕೋಹಂ ಭ್ರಮೆ, ಜಾತಿಭ್ರಮೆ, ಕುಲಭ್ರಮೆ, ಛಲಭ್ರಮೆ, ಹೀಗೆ ಮೂವತ್ತೆರಡು ಭ್ರಮೆಗಳ ಕಲ್ಪನೆ, ಈ ಭ್ರಮೆಗಳಿಂದ ಹೊರತಾದ ದಾರಿಯನ್ನು ಹಿಡಿಯಬೇಕು. ಅದುವೇ ದೇವನ ಸಾಕಾರ ರೂಪ ಈ ಜಗತ್ತು, ಜೀವರಾಶಿಗಳು. ಕಣ್ಣ ಮುಂದಿರುವ ಜಂಗಮ ಚೈತನ್ಯಪೂರ್ಣ ಜಗತ್ತನ್ನು ನೋಡುತ್ತಿದ್ದರೆ ಇಲ್ಲೇ ಇದರಲ್ಲೇ ದೇವನ ಲೀಲೆ ಕಂಡುಬರುತ್ತಿದೆ.

ಸಾಮಾನ್ಯವಾಗಿ ಅರಿಷಡ್ವರ್ಗಗಳನ್ನು ಕಳೆದುಕೊಳ್ಳಬೇಕೆಂಬುದು ಆಧ್ಯಾತ್ಮ ಪ್ರಪಂಚದ ಪ್ರತಿಯೊಬ್ಬರ ಹಂಬಲ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಎಂಬ ಈ ಆರು ಕಳೆದುಕೊಳ್ಳಬೇಕೆ? ಇವುಗಳನ್ನು ಕಳೆದುಕೊಳ್ಳಲು ಬರುತ್ತದೆಯೇ ಒಂದು ಪ್ರಶ್ನೆಯಾಗಿದೆ. ತನಗೆ ಬೇಕೆಂಬುದು ಕಾಮವಾದರೆ, ತನಗೆ ಬೇಕೆಂಬುದು ತನಗೆ ಸಿಗದೆ ಬೇರೆಯವರಿಗೆ ಸಿಕ್ಕರೆ ಅವರಲ್ಲಿ ಕ್ರೋಧವುಂಟಾಗುತ್ತದೆ. ತನಗೆ ಬೇಕೆಂಬುದು ತನಗೆ ಸಿಕ್ಕಾಗ ಅದು ನನಗೇ ಇರಲಿ ಎಂಬ ಲೋಭವುಂಟಾಗುತ್ತದೆ. ತನಗೆ ಸಿಕ್ಕದ್ದರಲ್ಲಿ ಅತಿಯಾದ ಮಮಕಾರ ವುಂಟಾದರೆ ಅದು ಮೋಹವೆನಿಸಿದೆ. ತನಗೆ ಸಿಕ್ಕದ್ದು ತನ್ನಲ್ಲಿ ಮಾತ್ರ ಇದೆ, ತಾನೇ ದೊಡ್ಡವನೆಂಬುದು ಬಂದಾಗ ಅದು ಮದವೆನ್ನಿಸಿದೆ. ತನಗೆ ಬೇಕೆಂಬುದು ತನಗೆ ಸಿಗದೆ ಬೇರೆಯವರಿಗೆ ಸಿಕ್ಕು ಅವರು ಬೆಳೆದರೆ ಅವರನ್ನು ಕೊನೆಗೆ ಕೊಲೆಮಾಡಿಯಾದರೂ ತಾನು ಸಂತಸಗೊಳಬೇಕೆಂಬುದರವರೆಗೆ ಬರುವಂತಹದೇ ಮತ್ಸರ. ಈ ಮತ್ಸರ ಬುದ್ಧಿ ತನುಕೆಡುವನ್ನಕ್ಕ ಮಾಣದು, ಹೆರರ ಛಿದ್ರಿಸುವನ್ನಕ್ಕ ಮಾಣದು. ಬೇರೆಯವರು ಹಾಳಾಗುವುದರೊಂದಿಗೆ ತಾನೂ ಸರ್ವ ನಾಶಹೊಂದುತ್ತಾನೆ. ಆದರೂ ಮತ್ಸರಬಿಡದು. ಇಂತಹ ತನ್ನನ್ನು ಕಾಡುವ, ಕೆಡಹುವ, ನಾಶಗೈಯುವ ಅರಿಷಡ್ವರ್ಗ ನಮಗೆ ಬೇಡ.

ಮತ್ತೊಂದು ಚಿಂತನೆಗೈದಾಗ ಮನುಷ್ಯನಲ್ಲಿ ಅನೇಕ ಸಂದರ್ಭಗಳಲ್ಲಿ ಅವನಲ್ಲಿ ಅನೇಕ ತರಹದ ಶಕ್ತಿಗಳು ಬಿಡುಗಡೆಯಾಗುತ್ತಿರುತ್ತವೆ. ಅವುಗಳ ಸದುಪಯೋಗ ಮಾಡದಿದ್ದರೆ ಅದು ಅವನಿಗೆ ನಷ್ಟ.

ಶಕ್ತಿಗಳ ಬಳಕೆ, ಉಪಯೋಗೀಕರಣ ಒಂದು ದಾರಿ. ಮತ್ತೊಂದು ಶಕ್ತಿಗಳ ನಾಶ. ಶರಣರು ಮತ್ತೊಂದು ದಾರಿ ತೋರುತ್ತಾರೆ. ಅದುವೇ ಉದಾತ್ತೀಕರಣ.

ಒಂದು ಕಡೆ ಚನ್ನಬಸವಣ್ಣನವರು ಹೀಗೆ ಹೇಳುತ್ತಾರೆ.

ಕಾಮಬೇಕು ಕಾಮಬೇಡ, ಕ್ರೋಧ ಬೇಕು ಕ್ರೋಧ ಬೇಡ, ಲೋಭ ಬೇಕು ಲೋಭ ಬೇಡ, ಮೋಹ ಬೇಕು ಮೋಹ ಬೇಡ, ಮದ ಬೇಕು ಮದ ಬೇಡ, ಮತ್ಸರ ಬೇಕು ಮತ್ಸರ ಬೇಡ, ಬೇಕೆಂಬುದಕ್ಕಾವ ಗುಣ, ಬೇಡೆಂಬುದಕ್ಕಾವ ಗುಣ. ಕಾಮಬೇಕು ಲಿಂಗದಲ್ಲಿ, ಕಾಮಬೇಡ ಪರಸ್ತ್ರೀಯಲ್ಲಿ ಕ್ರೋಧ ಬೇಕು ಕರಣಂಗಳಲ್ಲಿ, ಕ್ರೋಧಬೇಡ ಗುರುವಿನಲ್ಲಿ, ಲೋಭಬೇಕು ಪಾದೋದಕ ಪ್ರಸಾದದಲ್ಲಿ, ಲೋಭಬೇಡ ತನು, ಮನ, ಧನದಲ್ಲಿ, ಮೋಹ ಬೇಕು ಗುರುಲಿಂಗ ಜಂಗಮದಲ್ಲಿ, ಮೋಹ ಬೇಡ ಸಂಸಾರದಲ್ಲಿ, ಮದ ಬೇಕು ಶಿವಾಚಾರ ಘನವೆಂಬುದರಲ್ಲಿ, ಮದ ಬೇಡ ಶಿವಭಕ್ತರಲ್ಲಿ, ಮತ್ಸರ ಬೇಕು ಹೊನ್ನು ಹೆಣ್ಣು ಮಣ್ಣುಗಳಲ್ಲಿ, ಮತ್ಸರ ಬೇಡ ಸಕಲ ಪ್ರಾಣಿಗಳಲ್ಲಿ ಇಂತೀ ಸದ್ಗುಣ ಷಡ್ವಿಧ ಗುಣವನರಿದು ಮೆರೆಯಬಲ್ಲಡೆ ಆತನೇ ಸದ್ಭಕ್ತ ಕಾಣಾ ಕೂಡಲ ಚನ್ನಸಂಗಮದೇವಾ.

ಹೀಗೆ ಬಯಲ ಭ್ರಮೆ ಕಳೆದು ನಾವು ಉದಾತ್ತೀಕರಣಗೊಂಡ ಬದುಕಿನಿಂದ ಪುನೀತರಾಗೋಣ.

ಇಷ್ಟಲಿಂಗೋಪಾಸನೆ
ವೈಜ್ಞಾನಿಕ ಅರಿವು

ಶ್ರೀ ಬಸವ ಕುಮಾರ ಸ್ವಾಮೀಜಿ



೧.

ಈಗ
ನೀವು ಒಂದು
ಪ್ರಶ್ನೆ ಕೇಳಬಹುದು
ಕುರುಹು ಏಕೆ ಬೇಕು? ಈ
ಜಗತ್ತಿನಲ್ಲಿ ಕುರುಹಿಲ್ಲದೆ ಅರುಹು ಒರಲು
ಸಾಧ್ಯವಿಲ್ಲ.

ಉ: ಕಾವಿಬಟ್ಟೆ ಏತರ ಕುರುಹು? ತ್ಯಾಗದ ವಿರಾಗದ ಕುರುಹು ಯಾರ ಕುರುಹು? ಸನ್ಯಾಸಿಯ ಜಂಗಮರ ವಿರಕ್ತರ ಕುರುಹು ಖಾಕಿಬಟ್ಟೆ ಏತರ ಕುರುಹು? ರಕ್ಷಣೆಯ ಕುರುಹು. ಯಾರ ಕುರುಹು ಪೋಲೀಸರ ಕುರುಹು. ಖಾದಿಬಟ್ಟೆ ಏತರ ಕುರುಹು? ಸ್ವದೇಶಾಭಿಮಾನದ ಕುರುಹು. ಯಾರ ಕುರುಹು? ಕಾಂಗ್ರೆಸ್ಸಿಗರ – ರಾಜಕಾರಿಣಿಗಳ ಕುರುಹು. ರಾಷ್ಟ್ರಧ್ವಜ ಏತರ ಕುರುಹು? ಸ್ವಾತಂತ್ರ್ಯದ ಕುರುಹು, ಯಾವ ಕುರುಹು? ರಾಷ್ಟ್ರಧ್ವಜ ಆಯಾ ದೇಶಗಳ ಹೆಸರನ್ನು ಸೂಚಿಸುತ್ತದೆ. ೧೯೪೭ರ ನಂತರ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿತು. ದೇಶ ಯಾವಾಗಲೂ ಇರುತ್ತೆ ಆದರೆ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ಮೇಲೆ ನಮ್ಮ ದೇಶದ ಮುಖಂಡರು ಮತ್ತು ಗಾಂಧೀಜಿಯವರು ಸಮಾಲೋಚನೆ ಮಾಡಿ ಅರ್ಥಗರ್ಭಿತವಾದ ಜಗತ್ತಿನ ಯಾವ ದೇಶದವರೂ ಗುರುತಿಸಲಾರದ ಹೊಳೆಯಲಾರದ ತತ್ವ–ಸಿದ್ಧಾಂತದಿಂದ ಕೂಡಿದ ಧ್ವಜವೇ



ತಿರಂಗಾ ಧ್ವಜ ಕೇಸರಿ-ಬಿಳಿ-ಹಸಿರು ನಡುವೆ ಅಶೋಕಚಕ್ರ, ಅದು ಧರ್ಮದ ಸಂಕೇತ ತ್ಯಾಗ-ಶಾಂತಿ-ಸಮೃದ್ಧಿ ಸಂಕೇತ.

ಮಂಗಳಸೂತ್ರ ಮುತ್ತೈದೆಯ ಗಂಡನ ಕುರುಹು. ನ್ಯಾಯಾಂಗ ಬಡಾವಣೆಯಲ್ಲಿ ಪ್ರವಚನ ಮಾಡುವಾಗ ಒಬ್ಬ ಕಾಲೇಜು ಹುಡುಗಿ ಕೇಳಿದಳು, ಗಂಡುಮಕ್ಕಳಿಗೆ ಹೆಂಡತಿಯ ಕುರುಹು ಯಾವುದಿದೆ? ನಾನು ಹೇಳಿದೆ ಮಹಿಳಾ ಮಂಡಳದವರೆಲ್ಲಾ ಸೇರಿ ಒಂದು ಠರಾವು ಪಾಸು ಮಾಡಿರಿ. ಗಂಡಸರಿಗೊಂದು, ಲಗ್ನ ಆದ ಮೇಲೆ ಏನಾದರೊಂದು ಕುರುಹು ಹಾಕಲಿಕ್ಕೆ. ನಾನು ಅಡ್ವೋಕೇಟ್ ಮಾಡುತ್ತೇನೆ ನಿಮಗೆ ಮೂಗಿಗೆ ಕಟ್ಟಿ ಕೆಳಗೆ ಜೋತಾಡುವ ಹಾಗೆ ಪದಕ ಒಂದನ್ನು ಕಟ್ಟಿ ಬಿಡಿರಿ ಗಂಡಸರು ಪತ್ರಿಕೆಯ ಲಗ್ನವಾಗಿದ್ದು ಗೊತ್ತೇ ಆಗಲ್ಲ. ಪತ್ರಿಕೆ, ಟೀವಿಯಲ್ಲಿ ನೀವು ನೋಡುತ್ತೀರಿ ಒಬ್ಬೊಬ್ಬರು 4–5 ಕನ್ನೆಯರನ್ನು ಮಾಡಿಕೊಂಡು ಎಲ್ಲರಿಗೂ ಚಳ್ಳೆಹಣ್ಣು ತಿನ್ನಿಸುತ್ತಾ ಹಣದ ಮತ್ತು ಒಡವೆ ವಸ್ತ್ರದ ಆಸ್ತಿಯ ಆಸೆಗಾಗಿ ಮೋಸ ಮಾಡುತ್ತಾರೆ. ಕಾರಣ ಕುರುಹು ಇಲ್ಲದ ಕಾರಣ. ಮಂಗಳಸೂತ್ರ ನೋಡಿ ಈಕೆ ಗಂಡ ಉಳ್ಳವಳು ಅನ್ನಲಿಕ್ಕೆ ಬರುತ್ತದೆ.

ಕಿರೀಟ ಯಾರ ಕುರುಹು? ರಾಜನ ಕುರುಹು. ಏತರ ಕುರುಹು? ಅಧಿಕಾರದ ಕುರುಹು. ಕುರುಹು ಇಲ್ಲದೆ ಸಾಧ್ಯವೇ ಇಲ್ಲ. "We cannot speak without symbols. We cannot think without symbols. Words are nothing but symbols." ನಾವು ಸಹಿ ಮಾಡುತ್ತೇವೆ. ಯಾರ ಕುರುಹು? ವ್ಯಕ್ತಿಯ ಕುರುಹು. ಯಾವುದರ ಕುರುಹು? ಸಮ್ಮತಿಯ ಕುರುಹು. ನಗುವು ಸಂತೋಷದ ಕುರುಹು. ಅಳುವುದು ದುಃಖದ ಕುರುಹು. ರಸ್ತೆಯಲ್ಲಿ ಕಾರು ತೆಗೆದುಕೊಂಡು ಪ್ರವಾಸ ಮಾಡುವಾಗ ಹಾರ್ನ್ ಮಾಡುತ್ತೇವೆ. ಎಚ್ಚರಿಕೆಯ ಕುರುಹು ಕೆಂಪುದೀಪ – ಅಪಾಯದ ಕುರುಹು – ರಸ್ತೆ ಕೆಟ್ಟಿದೆ ಅಂತಾ ಭಾವಿಸುತ್ತೇವೆ. Deviation Road ಈ ಕಡೆಗೆ ಹೋಗಿ Reflect Stars ರಸ್ತೆಯ ತಿರುವು – ಬ್ರಿಡ್ಜ್ ರೇಲ್ವೆಗೇಟ್ ಇದನ್ನು ನೋಡಿ ನಮಗೆ ಗೊತ್ತಾಗುವುದು. ವಿಗ್ರಹಗಳು ಫೋಟೋಗಳು (ಮಹಾತ್ಮರ) ಅಧಿಕೃತವಾಗಿ ಅವರ ಸಂದೇಶಗಳು ನಮಗೆ ಮನವರಿಕೆಯಾಗುವುವು.

ಡಾಕ್ಟರ್ ಹೆಚ್ಚಾಗಿದ್ದಾರೆ. ಇದರ ಕುರುಹೇನು? ರೋಗಿಗಳು ಹೆಚ್ಚಾಗಿದ್ದಾರೆ. ವಕೀಲರು ಹೆಚ್ಚಾಗಿದ್ದಾರೆಂದರೆ ವ್ಯಾಜ್ಯಗಳು-ನ್ಯಾಯಗಳು ಹೆಚ್ಚಾಗಿವೆ ಅಂತಾ. ಶಿಕ್ಷಣ ಸಂಸ್ಥೆಗಳು ಹೆಚ್ಚಾಗಿದ್ದಾವೆ. ಕುರುಹೇನು? ಕಲಿಯುವವರು ಹೆಚ್ಚಾಗಿದ್ದಾರೆ. ಶಿಕ್ಷಣಕ್ರಾಂತಿ ಹೆಚ್ಚಾಗಿದೆ. ಜಗತ್ತಿನ ಎಲ್ಲಾ ವ್ಯವಹಾರಗಳು ನಡೆಯುವುದು ಮಾತಿನ ಮುಖಾಂತರವೆ. ಮಾತುಗಳು ಬೇರೆ ಅಲ್ಲಾ ಅವೆಲ್ಲಾ Symbols ಭಾಷೆಯ ಕುರುಹು.

ಕೆಲವು ಅಹಿಂದುಗಳು ಕುರುಹು ಬೇಡಾ ಅಂತಾರೆ, ಆದರೆ ಲೌಕಿಕದಲ್ಲಿ ಕುರುಹು ಇಲ್ಲದೆ ಸಾಧ್ಯವಿಲ್ಲ. ಸುಧಾರಣಾ ಧರ್ಮಗಳಾದ ಆರ್ಯಸಮಾಜ ಬ್ರಹ್ಮಸಮಾಜ, ಪ್ರಾರ್ಥನಾ ಸಮಾಜ ಇವರೆಲ್ಲರ ಕಲ್ಪನೆಯೇ ಬೇರೆ. ಪಾರಲೌಕಿಕವಾಗಿ ಕುರುಹು ಅವಶ್ಯವಾಗಿ ಬೇಕೆ ಬೇಕು.

'ಅರುಹು ಪೂಜಿಸಲೆಂದು ಕುರುಹು ಕೊಟ್ಟನು ಶ್ರೀಗುರು'ಸಾಕಾರವಿಲ್ಲದೆ ನಿರಾಕಾರ ಸಾಧ್ಯವಿಲ್ಲ. ತೋರಿಸಿರಿ ಅಂದರೆ ಏನರ್ಥ? ಉದಾ: ವಾತ್ಸಲ್ಯ ನಿರಾಕಾರ – ಪ್ರೀತಿನೂ ನಿರಾಕಾರ ಅದು ಕರ್ರಗೆ-ಕೆಂಪಗೆ ಇದೆ ಏನು? ಮುದ್ದುಸಾಕಾರ. ದಯಾ-ನಿರಾಕಾರ ಸಹಾಯ ಸೇವೆ ಸಾಕಾರ. ಭಕ್ತಿ ನಿರಾಕಾರ-ಅರ್ಚನೆ ಸಾಕಾರ ಭಕ್ತಿ ನಿರಾಕಾರ ಗುರುಗಳ ಸೇವೆ, ನಮಸ್ಕಾರ ಮಾಡುವುದು, ಕೆಲವು ಜನ ಇರುತ್ತಾರೆ. ಸೇವೆನೂ ಮಾಡುವುದಿಲ್ಲ. ನಮಸ್ಕಾರನೂ ಮಾಡುವುದಿಲ್ಲ.

ಆರ್ಯಸಮಾಜದ ಜೊತೆ ಒಮ್ಮೆ ವಾದ

ಮಾಡ್ತಾ ಇರುವಾಗ ದಯಾನಂದ ಸರಸ್ವತಿ ಬರೆದಂಥ ಗ್ರಂಥ "ಸತ್ಯಾರ್ಥ ಪ್ರಕಾಶಿಕೆ" ಅದು ಅವರ ಧರ್ಮಗ್ರಂಥ ಇದ್ದಹಾಗೆ. ಸಾಕಾರ ಮನ್ನಿಸಬಾರದು ಅನ್ನುತ್ತಾರೆ. ಇದರ ಕುರಿತು ವಾದಾ ಮಾಡುತ್ತಾರೆ. ಸಾಕಾರವಾದ ಪುಸ್ತಕದಿಂದ ನಿರಾಕಾರ ಜ್ಞಾನ ಆಗುತ್ತದೆ. ಅದರಂತೆ ನಿರಾಕಾರ ದೇವನನ್ನು ಪೂಜೆ ಮಾಡಬೇಕಂದ್ರೆ ಸಾಕಾರವಾದ ಇಷ್ಟಲಿಂಗ ಅವಶ್ಯವಾಗಿ ಬೇಕು. ಭಾವ ನಿರಾಕಾರ. ಅಕ್ಷರ ಸಾಕಾರ-ಪುಸ್ತಕ ಸಾಕಾರ ಬಿಂದು ಅಂದರೆ ಒಂದು ಚುಕ್ಕೆ ಇಡುತ್ತೇವೆ. ರೇಖೆ ಅಂದರೆ ಒಂದು ರೇಖೆ ಎಳೆಯುತ್ತೇವೆ. ಬಿಂದುವಿನ ಸಾಕಾರಚುಕ್ಕೆ ಅಂತಾ ರೇಖೆಯ ಸಾಕಾರಗೆರೆಯನ್ನು ಹೇಗೆ ನಂಬುತ್ತೇವೆಯೇ ಹಾಗೆ ದೇವರ ಸಾಕಾರ ಇಷ್ಟಲಿಂಗ ಅಂತಾ ನಂಬಬೇಕು.

ಕೋಷ್ಟಕ ನಮಗೆ ಗೊತ್ತಿದ್ದರೆ ಗಣಿತ ಹೇಗೆ ಬಿಡಿಸುತ್ತೇವೆಯೋ (ಪಿಯುಸಿ) ಪದವಿಪೂರ್ವ ಹಾಗೂ ಬಿ.ಎಸ್‌ಸಿ. (ಬ್ಯಾಚಲರ್ ಆಫ್ ಸೈನ್ಸ್ ಕೋರ್ಸ್) ವಿಜ್ಞಾನ ಓದುವ ಮಕ್ಕಳಿಗೆ ಪಾಠ ಹೇಳಿ ಪ್ರಯೋಗಶಾಲೆಯಲ್ಲಿ ಕಪ್ಪೆಯನ್ನು ಕೊಯ್ದು ಶರೀರದ ರಚನೆಯ ಬಗ್ಗೆ ಹೇಗೆ ತಿಳಿಸುವರೋ ಎಂ.ಬಿ.ಬಿ.ಎಸ್. ಓದುವಾಗ ಪಾಠ ಹೇಳಿ ಹೆಣವನ್ನು ಕೊಯ್ದು ದೇಹ ರಚನೆಯ ಮಾಹಿತಿ ಪಡೆಯುವಂತೆ ಕೋರ್ಸ್ ಮುಗಿಸಿ ಜೀವಂತ ವ್ಯಕ್ತಿಯ ಆಯಾ ರೋಗಗಳನ್ನು ಕಂಡುಹಿಡಿದು ಶಸ್ತ್ರಚಿಕಿತ್ಸೆಯನ್ನು ಪ್ರಾಯೋಗಿಕವಾಗಿ ಮಾಡುವಂತೆ ಸಾಕಾರದಿಂದ ನಿರಾಕಾರ ರೋಗವನ್ನು ಕಡಿಮೆ ಮಾಡುತ್ತಾರೆ.

ಪ್ರವಚನ ಮಾಡುವಾಗ ನಿಮ್ಮನ್ನು ನಾವು ಪ್ರಶ್ನೆ ಮಾಡುತ್ತೇವೆ. ನಿಮ್ಮ ಕೈಯಲ್ಲಿ ಕಟ್ಟಿದ ಗಡಿಯಾರ ನೋಡಿ "ಟೈಂ ಎಷ್ಟಾಗಿದೆ?" ತೋರಿಸಿರಿ, ಅಂದಾಗ ಗಡಿಯಾರ ನೋಡಿ-ತೋರಿಸಿ ಸಮಯ ಹೇಳುತ್ತಾರೆಯೇ ವಿನಹ ಸಮಯ ತೋರಿಸಲಿಕ್ಕೆ ಬರಲ್ಲ. ದೊಡ್ಡ ದೊಡ್ಡ ವಕೀಲರು, ಡಾಕ್ಟರರು, ಎಂಜಿನೀಯರರು, ದೊಡ್ಡ ಅಧಿಕಾರಿಗಳು ಇರುತ್ತಾರೆ. ಜಗತ್ತಿನಲ್ಲಿ ಯಾರೇ ಇರಲಿ ಯಾವುದೇ ದೊಡ್ಡಸ್ಥಾನದಲ್ಲಿದ್ದರೂ ಗಡಿಯಾರ ತೋರಿಸುತ್ತಾರೆಯೇ ವಿನಹ ಟೈಂ ತೋರಿಸಲಿಕ್ಕೆ ಆಗುವುದಿಲ್ಲ. ಸಾಕಾರ ಗಡಿಯಾರದಿಂದ ನಿರಾಕಾರವಾದ ಸಮಯ ತಿಳಿದುಕೊಳ್ಳುವಂತೆ ನಿರಾಕಾರ ದೇವನನ್ನು ಅರಿಯಲಿಕ್ಕೆ ಸಾಕಾರ ಇಷ್ಟಲಿಂಗ ಅವಶ್ಯವಾಗಿ ಬೇಕೇ ಬೇಕು. ಗಡಿಯಾರ ಕಟ್ಟಿಕೊಳ್ಳಲು ಜಾತಿ ಬೇಕೇನು? ಹಾಗೆ ಲಿಂಗದೇವನನ್ನು (ಇಷ್ಟಲಿಂಗ) ಕಟ್ಟಿಕೊಳ್ಳಲು ಜಾತಿ ಇಲ್ಲ. ಬೇಕಾಗಿಲ್ಲ. ಯಾರು ಗಡಿಯಾರ ಕಟ್ಟಿಕೊಳ್ಳುತ್ತಾರೆಯೋ ಅವರಿಗೆ ಟೈಂ ತೋರಿಸುತ್ತದೆ.

ಗುಡಿಯೊಳಗಿನ ಸ್ಥಾವರಲಿಂಗ ಟವರ್‌ಕ್ಲಾಕ್ ಇದ್ದ ಹಾಗೆ. ಇಷ್ಟಲಿಂಗ ರಿಸ್ಟ್‌ವಾಚ್ ಇದ್ದ ಹಾಗೆ. ನಾವು ವೇಳೆ ನೋಡಬೇಕಾದರೆ ಅಲ್ಲಿಗೇ ಹೋಗಿ ನೋಡಬೇಕು. ಆದರೆ ಈ ಗಡಿಯಾರ ನಾವು ಎಲ್ಲೆಲ್ಲಿ ಹೋಗುತ್ತೇವೆಯೋ ಅಲ್ಲಲ್ಲಿ ನಮ್ಮ ಜೊತೆಗೇ ಇರುತ್ತದೆ. ಇಂಗ್ಲೆಂಡ್ ಅಮೇರಿಕಾಕ್ಕೆ ಹೋದರೆ ಅಲ್ಲಿಯೂ ನೋಡಲಿಕ್ಕೆ ಬರುತ್ತದೆ. ಇಷ್ಟಲಿಂಗ ಜಾತಿ ಕುರುಹಲ್ಲ. ಗಡಿಯಾರ ಕಟ್ಟಿಕೊಳ್ಳುವುದು ಒಂದು ಕಲೆ ಇದೆ. ಕೆಲವು ಗೌಡರು-ಗೌಡತಿ ಚೇರ್‌ಮನ್‌ರವರು ಗಡಿಯಾರ ಕಟ್ಟಿಕೊಂಡಿರುತ್ತಾರೆ. ಅವರು, ಕೆಲವರು ಹೆಬ್ಬೆಟ್ಟಿನವರಿರುತ್ತಾರೆ. ಟೈಂ ಎಷ್ಟಾಗಿದೆ ಅಂದರೆ ನೀವೇ ನೋಡಿಕೊಳ್ಳಿರಿ ಅಂತಾ ಕೈ ಮುಂದೆ ಮಾಡುವರು. ಅದರಂತೆ ಇಷ್ಟಲಿಂಗ ಕಟ್ಟಿಕೊಂಡವರಿಗೆಲ್ಲ ಸಾಕ್ಷಾತ್ಕಾರ ಆಗುತ್ತದೆ ಅಂತಲ್ಲ. ಅದೂ ಕಲೆ ಇದೆ. ಗಡಿಯಾರ ನೋಡುವುದು ಒಂದು ಕಲೆ, ಯಾವ ರೀತಿ ಇದೆಯೋ ಅದರಂತೆ ಇಷ್ಟಲಿಂಗಪೂಜೆ ಲಿಂಗಾಂಗಯೋಗ ಸಾಧಿಸಿಕೊಳ್ಳುವುದೂ ಒಂದು ಕಲೆ ಇದೆ.

ನಮ್ಮ ಆಶ್ರಮದ ಚಿಕ್ಕ ಹುಡುಗಿ, ಸ್ವಾಮೀಜಿ ನನಗೂ ಒಂದು ಗಡಿಯಾರ ಕೊಂಡುಕೊಡಿ-ನನಗೂ ಒಂದು ಕೊಂಡು-ಕೊಡಿ ಅಂತಾ ಹಠ ಹಿಡಿದಳು. ಯಾರೋ ಜಾತ್ರೆಗೆ ಹೋಗುವವರಿದ್ದರು ಅವರಿಗೆ ಒಂದು ಪ್ಲಾಸ್ಟಿಕ್ ಗಡಿಯಾರ ತರಲಿಕ್ಕೆ ಹೇಳಿದೆವು. ಆ

ಪುಟ 15ರಲ್ಲಿ ಮುಂದುವರಿಯುವುದು



ಸಹನಾ ಬೆಂಗಳೂರು.

1. ಧ್ಯಾನ ಮಾಡುವಾಗ ನಮ್ಮ ಮನಸ್ಸನ್ನು ಪ್ರತಿ ಚಕ್ರದಲ್ಲಿ ನಿಲ್ಲಿಸಿ ಮೇಲೇರಿಸುತ್ತಾ ಹೋಗಬೇಕಾ ಅಥವಾ ಭ್ರೂಮಧ್ಯದಲ್ಲಿ ದೃಷ್ಟಿ ನಿಲ್ಲಿಸಿ ಧ್ಯಾನಾ ಮಾಡಿದರೆ ಸಾಕಾ ?

ನಮ್ಮ ಲಿಂಗಾಯತ ಧರ್ಮದಲ್ಲಿ ಇಷ್ಟಲಿಂಗವೆಂಬುದೊಂದು ಅದ್ಭುತ ಸಾಧನ. ಸದ್ಗುರುಗಳಿಂದ ದೀಕ್ಷೆ ಪಡೆದು ಅಂಗುಷ್ಟ ಪ್ರಮಾಣವಿದ್ದ ಮ್ಯಾಗ್ನೆಟ್ ಲಿಂಗವನ್ನು ಧರಿಸಬೇಕು. ಕ್ರಮಬದ್ಧ ಅಷ್ಟವಿಧಾರ್ಚನೆ ಮಾಡಿ ಲಿಂಗಸ್ತವನ, ಬಲಗಡೆ ಭುಜದ ಎತ್ತರಕ್ಕೆ ದೀಪಸ್ತಂಭವನ್ನಿಟ್ಟು ದೀಪದ ಕಿರಣವು ಇಷ್ಟಲಿಂಗದ ಮೇಲೆ ಬೀಳಬೇಕು. ಆ ಕಿರಣದ ಮೇಲೆ ಅನಿಮಿಷ ದೃಷ್ಟಿಯಿಂದ ಯೋಗವನ್ನು ಮಾಡುತ್ತಾ ಅಂ-ದರೆ ನಿಧಾನವಾಗಿ ಆಧಾರ ಚಕ್ರದಿಂದ ವಾಯುವನ್ನು ಮೇಲೇರಿಸುತ್ತಾ ಬೆನ್ನು ಹುರಿಯಲ್ಲಿದ್ದ ಸುಷುಮ್ನ ನಾಡಿಯ ಮುಖಾಂತರ ಮಂತ್ರ ಜಪವನ್ನು ಮಾಡುತ್ತಾ ಸಾಗಬೇಕು. ಕೆಲವಾರು ವರುಷಗಳಲ್ಲಿ ಒಂದೇ ಕ್ಷಣದಲ್ಲಿ ಮೇಲೇರಿಸಿ ಬ್ರಹ್ಮರಂಧ್ರ, ಶಿಖಾಚಕ್ರ ಅದನ್ನು ದಾಟಿ ಪಶ್ಚಿಮ ಚಕ್ರದವರೆಗೆ ಹೋಗಿ ನಿಲ್ಲಿಸಬಹುದು. ಪದ್ಮಾಸನ ಹಾಕಿ ಈ ಸಾಧನೆ ಮಾಡಿದರೆ ತುಂಬಾ ಬೇಗನೆ ಸಾಧನೆ ಮಾಡಿ ಸಿದ್ಧಿಯನ್ನು ಪಡೆಯಬಹುದು. ಇದು ನನ್ನ ಅನುಭವ. ಹೆಚ್ಚಿನ ಮಾಹಿತಿಗಾಗಿ ಸಮಕ್ಷಮ ಬಂದು ಪ್ರಾತ್ಯಕ್ಷಿಕವಾಗಿ ಅನುಭವವನ್ನು ಹಂಚಿಕೊಳ್ಳಬಹುದು.

2. ನಾವು ಲಿಂಗಧಾರಿಗಳಾದ ಮೇಲೆ ಇಷ್ಟಲಿಂಗ ಪೂಜಾ ನಂತರ ದೊರೆಯುವ ಪಾದೋದಕ, ಪ್ರಸಾದ ಹೊರತುಪಡಿಸಿ ಬೇರೆ ಪ್ರಸಾದವನ್ನು ತೆಗೆದುಕೊಳ್ಳಬಾರದಲ್ಲವೆ ?

"ಕಟ್ಟಿದ ಲಿಂಗವ ಬಿಟ್ಟು ಬೆಟ್ಟದ ಲಿಂಗಕ್ಕೆ ಹೋಗಿ ಹೊಟ್ಟೊಡೆಯಾಗಿ ಬೀಳುವ ಲೊಟ್ಟೆ ಮಾಳರ ಕಂಡರೆ ಮೆಟ್ಟಿದ ಎಡ ಪಾದರಕ್ಷೆಯ ತೆಗೆದು ಲಟಲಟನೆ ಹೊಡೆಯೆಂದ ನಮ್ಮ ಅಂಬಿಗರ ಚೌಡಯ್ಯ ನಿಜ ಶರಣ".

ಗಣಾಚಾರಿ ಶರಣರು ಇಷ್ಟಲಿಂಗವನ್ನು ಬಿಟ್ಟು ಬೇರೆ ದೈವಕ್ಕೆ ಎರಗದೆ ಅದರ ಎಂಜಲವನ್ನು ಬಿಟ್ಟು ಬೇರೆ ದೈವಕ್ಕೆ ಎರಗದೆ, ಅದರ ಎಂಜಲವನ್ನು ತನ್ನದೆ ಇರಬೇಕೆಂದು ಎಚ್ಚರಿಸುವ ಏಕದೇವೋಪಾಸನೆಯನ್ನು ಕಡ್ಡಾಯವಾಗಿ ಅರ್ಜಿಸಿ ಕೊನೆಗೆ ಗುರು ಬಸವ ಕರುಣೋದಕ, ಲಿಂಗದೇವ ಕರುಣೋದಕ, ಜಂಗಮ–ಶರಣರ ಕರುಣೋದಕವನ್ನು ಅದರ ಜೊತೆಗೆ ಕರುಣ ಪ್ರಸಾದವನ್ನು ತೆಗೆದುಕೊಳ್ಳಲು ಹೇಳಿದ್ದಾರೆ. ಶ್ರೀಗುರು ಬಸವಂಗೆ ಶರಣಾಗಿಹೆ, ಲಿಂಗದೇವನಿಗೆ ಶರಣಾಗಿಹೆ, ಶರಣ ಗಣಕ್ಕೆ ಶರಣಾಗಿಹೆ, ಕರುಣ ಪ್ರಸಾದ ಸ್ವೀಕರಿಸಿಹೆ, ಗಣ ಪದವಿಯನ್ನು ನಾ ಹೊಂದಿಹೆ ಎಂದು ಹೇಳಬೇಕು.

***** ಓದುಗರಿಗೆ ವಿಶೇಷ ಸೂಚನೆ *****

ಶರಣ ಬಂಧುಗಳೆ ನೀವು ಸಮಸ್ಯೆಯಿಂದ ಬಳಲುತ್ತಿದ್ದರೆ ನಿಮ್ಮ ಸಮಸ್ಯೆಯನ್ನು ಪತ್ರ ಅಥವಾ basavakumaraswamiji@gmail.com ಮೇಲ್‌ಗೆ ಕಳಿಸಬಹುದು. ಪೂಜ್ಯಶ್ರೀ ಮಾತಾಜಿಯವರು ಕಲ್ಯಾಣ ಕಿರಣದಲ್ಲಿ ಪರಿಹಾರ ತಿಳಿಸುತ್ತಾರೆ.

ಇಷ್ಟಲಿಂಗೋಪಾಸನೆ

ವೈಜ್ಞಾನಿಕ ಅರಿವು

ಗಡಿಯಾರವನ್ನು ಹುಡುಗಿಯ ಕೈಯಲ್ಲಿ ಕಟ್ಟಿದೆವು. ಆ ಮಗು ಎಲ್ಲರಿಗೂ ತೋರಿಸಿ, ನೋಡ್ರಿ ನಾನು ಗಡಿಯಾರ ಕಟ್ಟಿಕೊಂಡಿದ್ದೇನೆ. ಇದು ನನ್ನ ಗಡಿಯಾರ ನೋಡ್ರಿ ಅಂತಾ ಪ್ಲಾಸ್ಟಿಕ್ ಗಡಿಯಾರಕ್ಕೆ ಇಷ್ಟು ಖುಷಿ ಆಯಿತು. ಆದರೆ ನಿಜವಾದ ಹೆಚ್.ಎಂ.ಟಿ. ಗಡಿಯಾರ ಕಟ್ಟಿಕೊಂಡರೆ ನಿಜವಾಗಿಯೂ ಖುಷಿಯಾಗುತ್ತೆ.

"ಮನವೆಂಬ ಮರ್ಕಟನು ತನುವೆಂಬ ವೃಕ್ಷವನೇರಿ ಇಂದ್ರಿಯಗಳೆಂಬ ಶಾಖೋಪ ಶಾಖೆಗೆ ಹಾರಿ ವಿಷಯಂಗಳೆಂಬ ಹಣ್ಣು ಫಲವ ಗ್ರಹಿಸಿ ಭವದತ್ತ ಮುಖವಾಗಿ ಹೋಗುತ್ತಿದೆ ನೋಡಾ ! ಈ ಮನವೆಂಬ ಮರ್ಕಟನ ನಿಮ್ಮ ನೆನಹೆಂಬ ಪಾಶದಲ್ಲಿ ಕಟ್ಟಿ ಎನ್ನನುಳುಹಿಕೊಳ್ಳಯ್ಯ, ಅಖಂಡೇಶ್ವರಾ ಶ್ರೀ ಷಣ್ಮುಖ ಶಿವಯೋಗಿಗಳು, ಕೋತಿಯಂತೆ ವರ್ತಿಸುವ ಮನವನ್ನು ದೇವನ ಪ್ರಾರ್ಥನೆಯ ಹಗ್ಗದಿಂದ ಕಟ್ಟಿ ಅಸ್ತಿತ್ವವನ್ನು ಉಳಿಸಿಕೊಳ್ಳಲು ನಿವೇದಿಸಿಕೊಂಡಿದ್ದಾರೆ.

ಉದಾ : ಒಬ್ಬ ಮಾಂತ್ರಿಕ ಒಂದು ದೆವ್ವವನ್ನು ತನ್ನ ಮಂತ್ರಶಕ್ತಿಯಿಂದ ಚಿಕ್ಕದನ್ನಾಗಿ ಮಾಡಿ ಒಂದು ಬಾಟಲ್‌ನಲ್ಲಿ ಇರಿಸಿಕೊಂಡು ಬಂದಿದ್ದ. ದೊಡ್ಡ ಪಟ್ಟಣದ ಸರ್ಕಲ್‌ನಲ್ಲಿ ಹರಾಜಿಗೆ ಇಟ್ಟು ಹೇಳುತ್ತಿದ್ದ, ನನ್ನ ಕಡೆ ಒಂದು ದೆವ್ವ ಇದೆ. ಅದರಿಂದ ಅದ್ಭುತವಾದ ಕೆಲಸಗಳನ್ನು ಮಾಡಿಸಿಕೊಳ್ಳಬಹುದು. ದೊಡ್ಡ ಜಮೀನುದಾರರು ನೂರಾರು ಎಕರೆ ಜಮೀನಿನಲ್ಲಿ ಕೆಲಸ ಮಾಡಿಸಲು ಆಳುಗಳ ಕೊರತೆ ತುಂಬಾ ಆಗುತ್ತೆ. ದೆವ್ವದಿಂದ ಸಾಕಷ್ಟು ಕೆಲಸ ಕಾರ್ಯಗಳನ್ನು ಮಾಡಿಸಿಕೊಳ್ಳಬಹುದೆಂದು ಊಹಿಸಿ ಲಕ್ಷಾಂತರ ಹಣಕೊಟ್ಟು ಖರೀದಿಸಿದ. ಆ ಬಾಟಲ್‌ನ್ನು ಒಯ್ಯುವಾಗ ಒಂದು ಮಾತನ್ನು ಮಾಂತ್ರಿಕ ಹೇಳಿದ. ಬಾಟಲ್ ಓಪನ್ ಮಾಡಿದಾಗ ಅದು ಬೃಹದಾಕಾರವಾಗಿ ಎದ್ದು ನಿಲ್ಲುವುದು ಹೆದರಬೇಡಿರಿ ಅಂತಾ.

ಮನೆಗೆ ಆ ಬಾಟಲ್ ತೆಗೆದುಕೊಂಡು ಬಂದಾ, ಓಪನ್ ಮಾಡಿದಾ ಬೃಹದಾಕಾರವಾಗಿ ಎದುರು ನಿಂತಿತು. ಕೆಲಸಗಳನ್ನು ಏನು ಮಾಡಬೇಕು ಹೇಳು ಅಂತಾ. ಒಂದೊಂದಾಗಿ ಹೇಳುತ್ತಾ ಹೋದಾ ಮಾಡಲಿಕ್ಕೆ ಹತ್ತಿತು ಕೆಲವೇ ಘಂಟೆಗಳಲ್ಲಿ ಉದಾ : ನೂರಾರು ಎಕರೆ ಉಳುಮೆ ಮಾಡುವುದು, ಬೀಜ ಬಿತ್ತುವುದು, ನೀರು ಹಾಯಿಸುವುದು, ದೊಡ್ಡ ಭಾವಿ ತೆಗೆಯುವುದು, ಆರ್.ಸಿ.ಸಿ. ಮನೆ ಕಟ್ಟುವುದು ಎಲ್ಲವನ್ನು ಮಾಡಿತು. ಇವನು ನೆನಪು ಮಾಡಿಕೊಂಡು ಹೇಳುವಷ್ಟು ಸಹ ಸಮಯ ಸಿಗಲಿಲ್ಲಾ. ನೀನು ಕೆಲಸ ಹೇಳದಿದ್ದರೆ ನಿನ್ನನ್ನು ನುಂಗಿ ನೀರು ಕುಡಿಯುತ್ತೇನೆ ಅಂದಿತು. ಆಗ ಈತನಿಗೆ ಮಾಂತ್ರಿಕ ಒಂದು ಸಲಹೆ ಕೊಟ್ಟಿದ್ದಾ. ನಿನಗೆ ಸಮಸ್ಯೆ ಬಂದಾಗ ನನಗೆ ಮೊಬೈಲ್ ಮೂಲಕ ಫೋನ್ ಮಾಡು ಸಮಸ್ಯೆಗೆ ಪರಿಹಾರ ಹೇಳುತ್ತೇನೆ ಅಂತಾ ಕೇಳಿದಾ ಪರಿಹಾರ ಹೇಳಿದಾ, ಆ ಸಮಯದಲ್ಲಿ ಒಂದು ದೊಡ್ಡದಾದ 50 ಅಡಿ ಎತ್ತರದ ಕಂಭವನ್ನು ತಗ್ಗು ತೆಗೆದು ಹುಗಿದ ಮೇಲೆ ಏರು ಅಂದಾ, ಕೆಳಗೆ ಇಳಿ ಅಂದಾ. ಈ ರೀತಿಯಾಗಿ ನಾನು ಕೆಲಸ ಹೇಳುವವರೆಗೆ ಇದನ್ನು ಮಾಡು ಅಂದಾ. ಅದೇ ರೀತಿ ಮಾಡಹತ್ತಿತ್ತು. ಕೆಲಸಗಳಿದ್ದಾಗ ಕೆಲಸ ಹೇಳಿ ಮಾಡಿಸುವುದು ಬಿಡುವಿನ ವೇಳೆ ಏರುವುದು ಇಳಿಯುವುದು ಮಾಡುತ್ತಾ ಅವನ ವಶವಾಯಿತು.

ಇದು ದೃಷ್ಟಾಂತ, ಇನ್ನು ದ್ರಾಷ್ಟಾಂತ ಏನೆಂದರೆ, ಮನಸ್ಸು ಒಂದು ಅದ್ಭುತ ಸಾಧನ ಇಡೀ ಜಗತ್ತನ್ನೇ ಆಳುವಂಥ ಶಕ್ತಿ ಇದೆ. ಆದರೆ ಅದೆಲ್ಲಾ ಆದ ಮೇಲೆ ದಿನ ನಿತ್ಯ ಕೆಲವು ಸಮಯವಾದರೂ ಪೂಜೆ, ಪ್ರಾರ್ಥನೆ, ಧ್ಯಾನ, ಸತ್ಸಂಗ, ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ, ಜನಹಿತ ಕಾರ್ಯಗಳಲ್ಲಿ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದೇಯಾದರೆ ನಾವು ದೊಡ್ಡ ವ್ಯಕ್ತಿಗಳಾಗಲಿಕ್ಕೆ ಖಂಡಿತ ಸಾಧ್ಯ.

ಮುಂದುವರಿಯುವುದು...





ಬಸವಕಲ್ಯಾಣ
ಕಲ್ಯಾಣ ಪರ್ವದ
ಸುಮಧುರ
ಕ್ಷಣಗಳು










ಬಸವಕಲ್ಯಾಣ
ಕಲ್ಯಾಣ ಪರ್ವದ
ಸುಮಧುರ
ಕ್ಷಣಗಳು

ಶರಣರ ಡೊಂಕು



ವಚನವಾಣಿ

ಮಾತೆ ಕಸ್ತೂರಿದೇವಿ

ಹಾವಿನ ಡೊಂಕು ಹುತ್ತಕ್ಕೆ ಸಸಿನ, ನದಿಯ ಡೊಂಕು ಸಮುದ್ರಕ್ಕೆ ಸಸಿನ,
ನಮ್ಮ ಲಿಂಗದೇವನ ಶರಣರ ಡೊಂಕು ಲಿಂಗಕ್ಕೆ ಸಸಿನ.
-ಗುರು ಬಸವಣ್ಣನವರು

ಇದೇನಿದು ಡೊಂಕು?! ಅದರಲ್ಲೂ ಶರಣರಿಗೆ ಡೊಂಕುಂಟೆ? ಇದ್ದಲ್ಲಿ ಅದೆಂಥಾ ಡೊಂಕು? ಈ ಡೊಂಕು ಬಹಳ ದಿನಗಳಿಂದ ತಲೆ ಕೊರೆಯುತ್ತಿತ್ತು. ಇದಕ್ಕೆ ಮುಕ್ತಿ ಹಾಡಬೇಕೆಂದು ನಿರ್ಧರಿಸಿ ಈ ಲೇಖನ ಬರೆಯುವ ಧೈರ್ಯ ಮಾಡಬೇಕಾಯಿತು. ಲೋಕದ ಡೊಂಕಿನ ಬಗ್ಗೆ ಕೇಳಿದ್ದೇವೆ. ಗುರು ಬಸವಣ್ಣನವರ ಪ್ರಸಿದ್ಧ ವಚನ....

'ಲೋಕದ ಡೊಂಕ ನೀವೇಕೆ ತಿದ್ದುವಿರಿ
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ'

ಎಂದು ಮತ್ತೊಬ್ಬರ ಲೋಪದೋಷಗಳ ಬಗ್ಗೆ ಚಿಂತಿಸದೆ ನಮ್ಮ ತನುಮನದಲ್ಲಿರುವ ಲೋಪ-ದೋಷಗಳನ್ನು ಹುಡುಕಿ ತಿದ್ದಿಕೊಳ್ಳಿ ಎಂದು ಉಪದೇಶಿಸಿರುವುದು ನೆನಪಾಗುತ್ತಿದೆ. ಹೀಗಿರುವಾಗ ಈ ವಚನದಲ್ಲಿ ಶರಣರ ಡೊಂಕು ದೇವರಿಗೆ ಪ್ರಿಯವಾದುದು ಎಂದು ಸಮರ್ಥಿಸಿರುವುದು ನಿಜಕ್ಕೂ ಚಿಂತನೆಗೀಡು ಮಾಡಿದೆ. ಇದರಿಂದ ನಮಗೆ



ತಿಳಿಯುವುದೇನೆಂದರೆ ವಚನಗಳು ಏಕಾಏಕೀ ತಮ್ಮ ನಿರ್ಧಾರವನ್ನು ಪ್ರಕಟಿಸುವುದಿಲ್ಲ. ವಿಷಯ ಯಾವುದೇ ಇರಲಿ, ಮೊದಲು ಧನಾತ್ಮಕ ಮತ್ತು ಋಣಾತ್ಮಕವಾಗಿ ಚಿಂತಿಸಿ, ಅನುಭವ ಮಂಥನ ಮಾಡಿ ಕೊನೆಗೆ ಸಾಧಕ-ಬಾಧಕಗಳನ್ನು ತೂಗಿ ನೋಡಿ ನಂತರ ಸಮನ್ವಯಗೊಳಿಸಿದ ನಿರ್ದಿಷ್ಟವಾದ ಪರಿಕಲ್ಪನೆಯ ತತ್ವವನ್ನು ಜಗತ್ತಿಗೆ ಕೊಟ್ಟಿರುವುದು ವೇದ್ಯವಾಗುತ್ತಿದೆ. ಅದೇ ರೀತಿ ಈ ಡೊಂಕಿನ ವಿಚಾರದಲ್ಲೂ ಆಗಿದೆ ಎಂದರೆ ತಪ್ಪಲ್ಲ. ಇಲ್ಲಿ ಡೊಂಕು ಅಂದರೆ ಲೋಕದ ದೃಷ್ಟಿಯಲ್ಲಿ ವ್ಯಕ್ತಿಯಲ್ಲಿ ಇರಬಹುದಾದ ಕೊರತೆ. ಮತ್ತೊಂದು ಅರ್ಥ ವಕ್ರತೆ ಎಂಬುದಾಗಿದೆ. ಇದನ್ನೆ ಪೂಜ್ಯ ಮಾತಾಜಿಯವರು 'ನೀರಿನ ತೊಟ್ಟಿಯಲ್ಲಿ ಒಂದು ಕೋಲನ್ನು ಇಟ್ಟರೆ, ಮೇಲೆ ನಿಂತು ನೋಡಿದಾಗ ನೀರಿನ ಮಟ್ಟದಿಂದ ಕೆಳಗಿರುವ ಕೋಲು ಬಾಗಿದಂತೆ ಕಾಣುವುದು. ಹಾಗೆಯೇ ವಿಷಯ ಪ್ರಪಂಚದ ಕೂಸಾಗಿ ಆಧ್ಯಾತ್ಮ ಸತ್ಯಗಳನ್ನು ನೋಡಿದಾಗ ಅವು ವಕ್ರವಾಗಿ ಕಂಡರೆ ಆಧ್ಯಾತ್ಮ ಪ್ರಪಂಚದ ಮಗುವಾಗಿ ನಶ್ವರ ಮೌಲ್ಯಗಳನ್ನು ನೋಡಿದರೆ ಅವು ವಿಕೃತ ಪುರುಷಾರ್ಥಗಳಾಗಿ ತೋರುವುವು' ಎಂದು ಶರಣರ ಡೊಂಕಿನ ಬಗ್ಗೆ ವ್ಯಾಖ್ಯಾನಿಸುತ್ತಾರೆ.

ಹಾವಿನ ಡೊಂಕು ಅಂದರೆ ಇಲ್ಲಿ ಸೊಟ್ಟಾಬಟ್ಟ ಹೋಗುವುದು. ಹಾವು ಈ ರೀತಿ ಅಂಕುಡೊಂಕಾಗಿ ಹೋಗುತ್ತದೆಂದೆ ಹುತ್ತದೊಳಗೆ ಸುಲಭವಾಗಿ ಇಳಿಯುತ್ತದೆ ಮತ್ತು ಅಪಾಯದಿಂದ ಪಾರಾಗಲು ವೇಗವಾಗಿ ಹೋಗಲು ಸಾಧ್ಯವಾಗುತ್ತದೆ. ಇನ್ನು ನದಿಯ ನೀರು ಎಲ್ಲಿಂದಲೋ ಬಂದು ಸುತ್ತು ಬಳಸಿ ಇಳಿದು ಬೆಟ್ಟಗುಡ್ಡಗಳ ಸಂದುಗೊಂದುಗಳಲ್ಲಿ ನುಗ್ಗಿ ಹರಿಯುವುದರಿಂದಲೆ ತನ್ನ ಮೂಲ ಗುರಿಯಾದ ಸಮುದ್ರವನ್ನು ಸೇರಲು ಸಾಧ್ಯವಾಗುತ್ತದೆ. ಅದೇ ರೀತಿ ಪರಮಾತ್ಮನಿಗೆ ಪ್ರೀತಿಪಾತ್ರರಾದ ಭಕ್ತರ-ಶರಣರ ಕೆಲವು ಡೊಂಕುಗಳು ಪರಮಾತ್ಮನನ್ನು ಸೇರಲು ಯಾವ ಅಡ್ಡಿಯನ್ನು ಉಂಟು ಮಾಡದೆ, ತಿದ್ದಲು ಆಗದೆ ಉಳಿದುಕೊಳ್ಳುತ್ತವೆ ಎನ್ನುತ್ತಾರೆ ಅಪ್ಪ ಬಸವಣ್ಣನವರು. ಶರಣರ ಈ ಡೊಂಕುಗಳು ಅಂತರಂಗದ ದೌರ್ಬಲ್ಯಗಳಾಗದೆ ಹೊರಗಿನಿಂದ ಬಂದು ಕುಳಿತ ಕಸಕಡ್ಡಿಗಳಂತಿದ್ದು ಇವುಗಳಿಂದ ದೇವರ ಕೃಪೆಗೆ ಅಡ್ಡಿಯಾಗಲಾರದು ಎಂಬುದೇ ವಚನಗಳ ಮತಿತಾರ್ಥ.

ಇದಕ್ಕೊಂದು ದೃಷ್ಟಾಂತ ಕೊಡಬಹುದು. ಅದೊಂದು ಶಾಲೆ. ಅಲ್ಲಿ ಮಕ್ಕಳಿಗೆ ತುಂಬಾ ಚೆನ್ನಾಗಿ ಪಾಠ ಹೇಳುತ್ತಿದ್ದ ಒಬ್ಬ ಶಿಕ್ಷಕರಿದ್ದರು. ಅವರ ಒಂದು ಕಾಲು ಸ್ವಲ್ಪ ಅಂದರೆ ಅರ್ಧ ಇಂಚಿನಷ್ಟು ಚಿಕ್ಕದಿತ್ತು. ಹೀಗಾಗಿ ಅವರು ಸ್ವಲ್ಪಮಟ್ಟಿಗೆ ಕುಂಟಿಕೊಂಡೆ ಓಡಾಡುತ್ತಿದ್ದರು. ಅವರು ಧರಿಸುತ್ತಿದ್ದ ಕೋಟಿನ ಮುಂಭಾಗವನ್ನು ದರ್ಜಿಯು ಸಮತೋಲನಗೊಳಿಸಿ ಹೊಲಿದಿದ್ದರೂ, ನಡೆಯುವಾಗ ಕುಂಟುತ್ತಿದ್ದ ಕಾರಣ ಕೋಟಿನ ಒಂದು ಭಾಗ ಕೊಂಚ ಕೆಳಗೆ ಮತ್ತೊಂದು ಭಾಗ ಮೇಲಕ್ಕೆ ಹೋದಂತೆ ನೋಡುಗರಿಗೆ ಭಾಸವಾಗುತ್ತಿತ್ತು. ಕೋಟಿನ ತುದಿಯ ಈ ಅಸಮತೋಲನ ಶಿಕ್ಷಕರಿಗೆ ಮುಜುಗರವೆನಿಸಿ, ಇದನ್ನು ಸರಿಪಡಿಸಿಕೊಳ್ಳುವ ಭ್ರಮೆಯಲ್ಲಿ ಶಿಕ್ಷಕರು ಪಾಠ ಮಾಡಲು ನಿಂತಾಗಲೆಲ್ಲ ಕೋಟಿನ ತುದಿಯನ್ನು ಪದೇಪದೆ ಜಗ್ಗುತ್ತಿದ್ದು ಅದೇ ಒಂದು ಚಟವೂ ಆಗಿ ಬೆಳೆದಿತ್ತು. ಇದರಿಂದ ಕೋಟಿನ ತುದಿ ಹರಿಯುತ್ತಿದ್ದು, ಹೊಸದಾಗಿ ಹೊಲಿಸಿಕೊಂಡ ಕೋಟುಗಳು ಸಹ ಬಹು ಬೇಗ ಹರಿಯುತ್ತಿದ್ದವು. ಅಲ್ಲದೆ ಇದರ ಬಗ್ಗೆ ಕೇಳುವವರಿಗೆ ಉತ್ತರಿಸುವುದು ಕಷ್ಟವಾಗುತ್ತಿತ್ತು. ಮೇಲಾಗಿ ಇದರಿಂದ ಮನೆಯಲ್ಲಿ ಹೆಂಡತಿ-ಮಕ್ಕಳು ಮೂದಲಿಸುವುದು ನಿತ್ಯ ದಿನಚರಿಯಾಗಿತ್ತು. ಆದರೆ ಈ ತಿದ್ದಲಾರದ ಚಟ(ಅಭ್ಯಾಸಬಲ)ದಿಂದ ಶಿಕ್ಷಕ ವೃತ್ತಿಗೇನೂ ಹಾನಿಯಿಲ್ಲ ಎಂಬುದೂ ಅಷ್ಟೇ ಸತ್ಯವಾಗಿತ್ತು.

ಆಯತ ಒಂದೆಡೆಯಲ್ಲಿ ತೆರನನರಿಯರಾಗಿ ನೋಡಬಾರದು, ನೋಡಿ ನುಡಿಸಬಾರದು. ಅದು ತಿದ್ದಬಾರದ ಡೊಂಕು ಲಿಂಗದೇವನ ಭಕ್ತಿ.

ಈ ವಚನದಲ್ಲಿ ಗುರು ಬಸವಣ್ಣನವರು ತಿದ್ದಬಾರದ ಡೊಂಕಿನ ಬಗ್ಗೆ ಪ್ರಸ್ತಾಪಿಸಿದ್ದಾರೆ. ಪ್ರವಚನ ಕೇಳಿಯೋ, ಆಶ್ರಯದ ಹಂಗಿಗೋ ಅಥವ ಅನ್ಯರು ಮಾಡುವ ಪೂಜೆಯನ್ನು ನೋಡಿಯೋ, ಮತ್ತಾವುದರಿಂದಲೋ ಪ್ರಭಾವಿತರಾಗಿ ಲಿಂಗದೀಕ್ಷೆ ಪಡೆಯುತ್ತಾರೆ. ಆದರೆ ಲಿಂಗದ ಮರ್ಮವನ್ನು ತಿಳಿಯಲು ಪ್ರಯತ್ನಿಸುವುದಿಲ್ಲ. ಲಿಂಗಪೂಜೆ, ಲಿಂಗಧ್ಯಾನ, ಅನುಸಂಧಾನ, ದೃಷ್ಟಿಯೋಗದ ಯಾವುದರ ಬಗ್ಗೆಯೂ ತಿಳಿದು ಮಾಡಿ ಆನಂದಿಸುವ ಕನಿಷ್ಟ ಪ್ರಯತ್ನವನ್ನು ಮಾಡುವುದೂ ಇಲ್ಲ. ಪರಮಾತ್ಮನೊಂದಿಗೆ ಆಧ್ಯಾತ್ಮ ಸಂಬಂಧವನ್ನು ಬೆಳೆಸಿಕೊಂಡು ಉಳಿಸಿಕೊಂಡು ಸಾಮರಸ್ಯ ಸಾಧಿಸುವುದನ್ನು ಅರಿಯುವುದಿಲ್ಲ. ಇಂಥ ಡೊಂಕಿನ ಭಕ್ತರನ್ನು ತಿದ್ದುವುದು ಅಸಾಧ್ಯವಾದುದು ಎಂಬ ಅಸಹಾಯಕತೆ ಇಲ್ಲಿ ವ್ಯಕ್ತವಾಗುತ್ತಿದೆ.

ಉದಾಹರಣೆಗೆ– ಆಕೆ ಒಬ್ಬ ಸೇವಾ ಮನೋಭಾವದ, ಶ್ರಮವರಿಯದ ಶರಣೆ. ಅವಳು ಪ್ರತಿದಿನ ಮುಂಜಾನೆ 4 ಗಂಟೆಯಿಂದ ರಾತ್ರಿ 11 ಗಂಟೆವರೆಗೂ ಬೇಸರ ಪಡದೆ ಅವಿಶ್ರಾಂತವಾಗಿ ನಗುನಗುತ್ತಾ ಸೇವೆ ಮಾಡುವುದರಲ್ಲಿ ಮುಂದು. ಆದರೆ ಆಕೆ ಕೊರಳಲ್ಲಿ ಲಿಂಗ ಧರಿಸಿದ್ದರೂ ಯಾವತ್ತೂ ಪೂಜೆ ಮಾಡುವುದನ್ನಾಗಲಿ ಅಥವ ವಿಭೂತಿ ಹಚ್ಚುವುದನ್ನಾಗಲಿ ಯಾರೂ ಕಂಡಿರಲಿಲ್ಲ. ಏಕೆ ಹೀಗೆ ಎಂದು ಯಾರಾದರೂ ಪ್ರಶ್ನಿಸಿದರೆ ಅವಳು 'ತಮ್ಮಂಥಹ ಶರಣರ ಸೇವೆಯೇ ನನಗೆ ಪೂಜೆ ಜಪ ಧ್ಯಾನ ಎಲ್ಲ' ಎಂದು ನಗುತ್ತಲೆ ಉತ್ತರಿಸುತ್ತಿದ್ದಳು. ಅಲ್ಲದೆ ದೇವರು, ಧರ್ಮ, ಆಧ್ಯಾತ್ಮ ವಿಚಾರಗಳನ್ನು ಗ್ರಹಿಸುವ ಶಕ್ತಿಯೂ ಅವಳಿಗಿರಲಿಲ್ಲ. ಇಷ್ಟಾದರೂ ಆಕೆಯನ್ನು ಎಲ್ಲರೂ ಪ್ರೀತಿ–ವಿಶ್ವಾಸದಿಂದಲೇ ಕಾಣುತ್ತಿದ್ದರು. ಏಕೆಂದರೆ ಇಂಥ ಕೈ–ಬಾಯಿ ಶುದ್ಧಿಯಾಗಿಸಿಕೊಂಡ ಸೇವಾವ್ರತಧಾರಿಗಳು ಸಿಗುವುದು ದುರ್ಲಭ ಅಲ್ಲವೆ?! ಇದಕ್ಕೆ ಇರಬೇಕು ಶರಣರ ತಿದ್ದಲಾರದ ಡೊಂಕುಗಳು ಕ್ಷಮಾರ್ಹ ಎಂದು ಬಸವಾದಿ ಪ್ರಮಥರು ಸಾರುತ್ತಿರುವುದು!!

ಲೋಕದ ನುಡಿ ತನಗೆ ಡೊಂಕು,
ತನ್ನ ನುಡಿ ಲೋಕಕ್ಕೆ ಡೊಂಕು.
ಊರ ಹೊದ್ದ, ಕಾಡ ಹೊದ್ದ,
ಆಪ್ಯಾಯನ ಮುಕ್ತಿ ವಿರಹಿತ ಶರಣ.
ಕಪಾಲದೊಳಗೆ ಉಲುಹಡಗಿದ,
ಕೂಡಲಚೆನ್ನಸಂಗಯ್ಯನಲ್ಲಿ ಒಂದಾದ,
ಲಿಂಗೈಕ್ಯವು.

ಚಿನ್ಮಯ ಜ್ಞಾನಿ ಚನ್ನಬಸವಣ್ಣನವರು ಈ ವಚನದಲ್ಲಿ ಪ್ರಾಪಂಚಿಕ ಜನರ ನಡೆನುಡಿಗಳು ತನಗೆ ಡೊಂಕಾಗಿ ಅಂದರೆ ವಕ್ರವಾಗಿ ಕಂಡರೆ ನನ್ನ(ಭಕ್ತನ) ನಡೆನುಡಿ, ಆಚಾರ ವಿಚಾರಗಳು ಸಹ ಲೌಕಿಕ ಜನರ ಕಣ್ಣಿಗೆ ವಕ್ರವಾಗಿ ಅಥವ ವಿಚಿತ್ರವಾಗಿ ತೋರುವುವು. ಇದು ಜಗತ್ತಿನ ಸ್ವಾಭಾವಿಕ ನಡೆ. ಆದರೆ ಶರಣನು ಊರಿನ ಲೌಕಿಕ ಅಥವ ಕಾಡಿನ ವೈರಾಗ್ಯ ಜೀವನ ಸಿದ್ಧಾಂತಗಳಿಗೆ ಮಾರುಹೋಗದೆ ಮತ್ತು ಈ ಬಗ್ಗೆ ಹೆಚ್ಚಿನ ಗಮನ ಹರಿಸದೆ ತಾನು ಹೊಂದಲಿರುವ ಮುಕ್ತಿಯ ಗುರಿಯೆಡೆಗೆ ಸಂತೃಪ್ತಿಯಿಂದ ಸಾಗುತ್ತಾನೆ. ಜಗತ್ತಿನ ಉಭಯ ದಂದುಗ(ಡೊಂಕುಗಳಿಗೆ)ಕ್ಕೆ ಉತ್ತರಿಸುವ ವ್ಯರ್ಥ ಪ್ರಯತ್ನ ಮಾಡದೆ ಮೌನವಾಗಿದ್ದುಕೊಂಡು ಪರಮಾತ್ಮನೊಡನೆ ಸಾಮರಸ್ಯದ ಆನಂದವನ್ನು ಅನುಭವಿಸುತ್ತಾನೆ ಎಂದು ಇಲ್ಲಿಯೂ ಸಹ ಲಿಂಗಾಂಗ ಸಮರಸದ ಅನುಭಾವದಲ್ಲಿರುವ ಶರಣರ ಡೊಂಕನ್ನು ಚನ್ನಬಸವಣ್ಣನವರು ಉಪೇಕ್ಷಿಸಿದ್ದಾರೆ.

ಸುರಿವ ಜಲಕ್ಕೆ ನೆಲ ಹೊಲೆಯೆಂದು ಪ್ರಮಾಣಿಸಬಹುದೆ ?
ಉರಿವ ಅನಲಂಗೆ ಶತಡೊಂಕು ಸಸಿನವೆಂಬುದುಂಟೆ ?

ಗುಹೇಶ್ವರಲಿಂಗಕ್ಕೆ ಲೇಸು ಕಷ್ಟವೆಂಬುದಿಲ್ಲ ಸಂಗನಬಸವಣ್ಣಾ

ವೈರಾಗ್ಯ ಚಕ್ರವರ್ತಿ ಅಲ್ಲಮ ಪ್ರಭುದೇವರು ತಮ್ಮ ವಚನದಲ್ಲಿ ಕೆಲವು ಉಪಮೆಗಳೊಂದಿಗೆ ಪರಮಾತ್ಮನ ದ್ವಂದ್ವರಹಿತ ಇರವನ್ನು ಸಮರ್ಥಿಸುತ್ತಿರುವುದು ಕಂಡುಬರುತ್ತಿದೆ. ಮೋಡದಿಂದ ಭೂಮಿಗೆ ಧಾರಾಕಾರವಾಗಿ ಸುರಿವ ಮಳೆಯು ನೆಲದಲ್ಲಿ ಮಡಿ–ಮೈಲಿಗೆ ಎಂದು ಭೇದವೆಣಿಸಿ ಸುರಿಯದೆ ಇರುವುದೆ? ಮಳೆ ಸುರಿಯುವುದರಿಂದ ನೆಲವು ತನ್ನ ಹೊಲಸನ್ನು ಕಳೆದುಕೊಂಡು ಗಿಡಮರಗಳು ಚಿಗುರೊಡೆದು ಹಸಿರಾಗುವುದು. ಅದರಂತೆ ಕೆನ್ನಾಲಿಗೆಯನ್ನು ಚಾಚಿ ಉರಿಯುವ ಬೆಂಕಿಯು ಎದುರಾಗುವ ನೂರಾರು ಅಡೆತಡೆಗಳನ್ನು ಲೆಕ್ಕಿಸದೆ ಎಲ್ಲವನ್ನೂ ಸುಟ್ಟು ಭಸ್ಮ ಮಾಡುವುದು.

ದೌರ್ಬಲ್ಯಗಳ ಆಗರವಾದ ಮಾನವನಿಗೆ ಡೊಂಕು(ಕೊರತೆ)ಗಳು ಇರುವುದು ಸಹಜ. ಇಂಥ ಡೊಂಕುಗಳು ಮಹಾಪರಾಧಗಳು ಅಲ್ಲವಾದ್ದರಿಂದ ದೇವರು ಸುರಿಯುವ ಮಳೆಯಂತೆ, ಉರಿಯುವ ಅನಲದಂತೆ ಶರಣರ ಡೊಂಕನ್ನು ಲೆಕ್ಕಿಸದೆ ತನ್ನ ಕರುಣೆಯ ಮಹಾಪೂರವನ್ನು ಹರಿಸಿ ಉದ್ಧರಿಸುತ್ತಾನೆ. ಶರಣರ ಡೊಂಕನ್ನು ಅಲಕ್ಷಿಸಿ ಅನುಗ್ರಹಿಸುವ ಸಾಮರ್ಥ್ಯ ಇರುವುದು ಡೊಂಕುರಹಿತನಾದ ಪರಮಾತ್ಮನಿಗೆ ಮಾತ್ರ ಎಂಬ ದೇವರ ನಿಷ್ಕಂಳಕತ್ವ ಮತ್ತು ಸಾರ್ವಭೌಮತ್ವವನ್ನು ಅಲ್ಲಮ ಪ್ರಭುದೇವರು ಈ ವಚನದಲ್ಲಿ ಸ್ಥಾಪಿಸಿದ್ದಾರೆ.

ನಮ್ಮಲ್ಲಿರಬಹುದಾದ– ಅನ್ಯರಿಗೆ ಗೋಚರವಾಗುವ ಡೊಂಕುಗಳ ಬಗ್ಗೆ ಹೆಚ್ಚಾಗಿ ಚಿಂತಿಸದೆ ನಮ್ಮ ಗುರಿಯೆಡೆಗೆ ಸಾಗೋಣ. ಏಕೆಂದರೆ ಪರಮಾತ್ಮನನ್ನು ಬಿಟ್ಟು ಯಾರು ಪರಿಪೂರ್ಣರಲ್ಲ ಎಂಬ ಶಾಶ್ವತ ಸತ್ಯ ನಮಗೆ ತಿಳಿದಿರಲಿ ಎಂದು ಪ್ರಾರ್ಥಿಸೋಣ.



ಚಿಂತನ ಮಂಥನ

ಸ್ವತಂತ್ರ ಧರ್ಮದ ಮಾನ್ಯತೆ

12ನೇ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರಿಗೆ ಜನವರಿ 1155ನೇ ಇಸವಿ 14 ರಂದು ಲಿಂಗದೇವನ ಸಾಕ್ಷಾತ್ಕಾರವಾಗಿ ವೈಜ್ಞಾನಿಕ-ವೈಚಾರಿಕತೆಯಿಂದ ಕೂಡಿದ ಇಷ್ಟಲಿಂಗವೆಂಬ ಅದ್ಭುತ ವಿಶ್ವಾತ್ಮನ ಕುರುಹು ಆವಿಸ್ಕಾರವಾಯಿತು. ಅಂದೇ ಧರ್ಮಗುರು ಬಸವಣ್ಣನವರಿಂದ ಸ್ವತಂತ್ರ ಲಿಂಗಾಯತ ಧರ್ಮ ಸಂಸ್ಥಾಪಿಸಲ್ಪಟ್ಟಿತು.

ಹಲವಾರು ದಶಕಗಳಿಂದ ಬಸವಧರ್ಮಪೀಠವು ಪ್ರಾಮಾಣಿಕವಾಗಿ ಪ್ರಚಾರದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದೆ. ಕೋಟಿ ಕೋಟಿ ಕರಪತ್ರ, ನಿರಂತರ ವಿಶ್ವಧರ್ಮಪ್ರವಚನಗಳನ್ನು ಹಮ್ಮಿಕೊಂಡು, ಇದಲ್ಲದೆ ಕೇಂದ್ರ ಸರ್ಕಾರದಿಂದ 10 ವರ್ಷಗಳಿಗೊಮ್ಮೆ ನಡೆಯುವ ಧರ್ಮವಾರು ಜನಗಣತಿಯ ಪೂರ್ವ, 17 ಲಕ್ಷ ಹಣಗಳಿಂದ ಕೂಡಿದ ವಿಶಿಷ್ಟವಾದ ತತ್ವಸಿದ್ಧಾಂತ, ಕಾನೂನು ರೀತ್ಯಾ, ತರ್ಕಬದ್ಧ ವಿಚಾರದಿಂದ ಕೂಡಿದ, ಸಂವಿಧಾನ ಬದ್ಧನಾದ ಪ್ರಶ್ನೆಗಳಿಗೆ ಉತ್ತರವನ್ನು ಜನಮನಕ್ಕೆ ಹಾಗೂ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ಸತ್ಯಾಗ್ರಹ, ಉಪವಾಸ ಸತ್ಯಾಗ್ರಹ, ಪ್ರತಿಭಟನೆ ಮೂಲಕ ಮನವರಿಕೆ ಮಾಡುತ್ತಾ ಮನವಿಗಳನ್ನು ಕೊಡುತ್ತಾ ಬಂದಿದ್ದು ಸರ್ವವಿದಿತ.

ಬ್ರಿಟಿಷ್ ಸರಕಾರವು ಈ ದೇಶದಲ್ಲಿ ಆಳ್ವಿಕೆ ಮಾಡುವಾಗ, ಜನಗಣತಿ ಮಾಡುವಾಗ ನಮ್ಮ ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಕೊಡುತ್ತೇವೆ ಅಂತಾ (ನಿಮ್ಮದೇ ಆದ ಸ್ಮಶಾನ ಭೂಮಿ ಪ್ರತ್ಯೇಕವಾಗಿದೆ ಮತ್ತು ಕೋರ್ಟಿನಲ್ಲಿ ಪ್ರಮಾಣ ಮಾಡುವಾಗ ವಚನ ಸಾಹಿತ್ಯ ಗ್ರಂಥ ಮತ್ತು ಇಷ್ಟಲಿಂಗ ಮುಟ್ಟಿ ಪ್ರಮಾಣ ಮಾಡುತ್ತೀರಿ ಅಂತಾ) ಹೇಳಿದಾಗ ಕೆಲವು ಸಾಂಪ್ರದಾಯಿಕ ಧಾರ್ಮಿಕ ನೇತಾರರ ಅಜ್ಞಾನದಿಂದ ಕೈ ತಪ್ಪಿ ಹೋಯಿತು.

ಭಾರತ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು 69 ವರ್ಷ ಗತಿಸಿದರೂ ನಮ್ಮ ಲಿಂಗಾಯತ ಧರ್ಮಕ್ಕೆ ಸಂವಿಧಾನಾತ್ಮಕವಾಗಿ ಕೇಂದ್ರ ಸರ್ಕಾರದಿಂದ ಮಾನ್ಯತೆ ಪಡೆಯದೇ ಇದ್ದುದರಿಂದ ಒಂದು ವರ್ಷಕ್ಕೆ ಒಂದು ಸಾವಿರಕೋಟಿಯಂತೆ 69 ಸಾವಿರ ಕೋಟಿ ರೂ. ಅನುದಾನವನ್ನು ಪಡೆಯಲು ಅಸಮರ್ಥರಾಗಿದ್ದೇವೆ. ಇನ್ನಾದರೂ ಮಠಾಧೀಶರು, ಧಾರ್ಮಿಕ ನೇತಾರರು ಸಂಘ ಸಂಸ್ಥೆಗಳು, ಬಸವ ಬಳಗಗಳು ಬಸವಾಭಿಮಾನಿಗಳು ಹಾಗೂ ಧರ್ಮದ ಅನುಯಾಯಿಗಳೆಲ್ಲರೂ ಎಚ್ಚೆತ್ತುಕೊಂಡು ಸಂವಿಧಾನಾತ್ಮಕವಾಗಿ ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮ ಅಂತಾ ಮಾನ್ಯತೆ ಪಡೆಯಲು ಪ್ರಯತ್ನಿಸೋಣ.

ಲಿಂಗಾಯತ ಧರ್ಮವು ಸ್ವತಂತ್ರ ಧರ್ಮವಾಗಿರುವುದನ್ನು ಬಸವಾದಿ ಶರಣರು ವಚನ ಸಾಹಿತ್ಯದ ಮೂಲಕ ಮಾರ್ಗದರ್ಶನ ಮಾಡಿದ್ದಾರೆ. ಈ ಧರ್ಮವು ಯಾವುದೇ ರೀತಿ ಜಾತಿ, ಮತ, ಪಂಥ, ವರ್ಗ, ವರ್ಣ, ಸ್ತ್ರೀ-ಪುರುಷರೆಂಬ ಭೇದಭಾವವಿಲ್ಲದೇ ಎಲ್ಲರೂ ಅರಿತು ಆಚರಿಸಬಹುದಾದ ಶ್ರೇಷ್ಠ ಮಾನವೀಯ ಧರ್ಮವಾಗಿರುತ್ತದೆ.

ಯಾವ ಕಾರಣದಿಂದ ಅಥವಾ ಯಾವ ಕಾರಣಗಳಿಗಾಗಿ ಜೈನ, ಬೌದ್ಧ, ಸಿಖ್, ಕ್ರಿಶ್ಚಿಯನ್, ಇಸ್ಲಾಮ್, ಹಿಂದೂ ಧರ್ಮಕ್ಕೆ ಮಾನ್ಯತೆಯನ್ನು ಕೇಂದ್ರ ಸರ್ಕಾರ

ಪುಟ 26ರಲ್ಲಿ ಮುಂದುವರಿಯುವುದು

ಆಚಾರ ಅರಿವು ಅನುಭಾವ

ಲಿಂಗಾಂಗ ಯೋಗ ಸಾಧನೆ -3



ಪೂಜ್ಯಶ್ರೀ ಬಸವಪ್ರಭು ಸ್ವಾಮೀಜಿ.



6.ಆಜ್ಞಾ: ಇನ್ನು ಆಜ್ಞಾ ಚಕ್ರ ವಿಶುದ್ಧಿ ಚಕ್ರದಿಂದ ಸಾಧಕನು ಶಕ್ತಿ ಊರ್ಧ್ವಮುಖಗೊಳಿಸಿಕೊಂಡು ಆಜ್ಞಾ ಚಕ್ರದ ಕಡೆಗೆ ಸಾಗಬೇಕು. ಇದು ತುಂಬಾ ಮುಖ್ಯವಾಗಿರುವಂತಹದ್ದು, ಸಾಧಕನ ಜೀವನದಲ್ಲಿ ಇದು ಅರಿವಿನ ಕಣ್ಣನ್ನು ತೆರೆಸುವಂತಹದ್ದು ಇದಕ್ಕೆ ಮೂರನೆ ಕಣ್ಣು ಎಂದೂ ಕರೆಯುತ್ತಾರೆ. ಇದು ಲಲಾಟದ ಎರಡು ಹುಬ್ಬುಗಳ ಮಧ್ಯದಲ್ಲಿ ಇರುವಂತಹದ್ದು. ಇಡಾ, ಪಿಂಗಳಾ, ಸುಷುಮ್ನಾ ನಾಡಿಗಳ ಮಿಲನದಿಂದ ಕೂಡಿದ್ದು, ಶ್ವೇತ ಬಣ್ಣವನ್ನು ಹೊಂದಿದೆ. 'ಒಂ'ಕಾರ ಬೀಜಾಕ್ಷರವು ಇದರ ಮಂತ್ರವಾಗಿದೆ. ಇದು ಎರಡು ದಳದಿಂದ ಕೂಡಿದೆ. ಈ ಚಕ್ರ ಜಾಗೃತಿಯಿಂದ ಹಾರ್ಮೋನುಗಳ ಬಿಡುಗಡೆಯಾಗಿ ಸಾಧಕನಲ್ಲಿ ಸಂಕಲ್ಪಸಿದ್ಧಿಯು ಪ್ರಾಪ್ತಿಯಾಗುತ್ತದೆ. ಹಾಗೆಯೇ ದಿವ್ಯಶಕ್ತಿ, ಜ್ಞಾನಶಕ್ತಿ ಉದಯವಾಗುತ್ತದೆ. ಇದರಿಂದ ತಲೆನೋವು, ರಾತ್ರಿ ಕುರುಡುತನ ಇತ್ಯಾದಿ ಕಾಯಿಲೆಗಳು ದೂರವಾಗುತ್ತವೆ. (ಬವ೬೦)

ಅಕ್ಕಮಹಾದೇವಿಯವರು ಹೇಳುವಂತೆ,

ದ್ವಿದಳ ತ್ರಿಕೂಟದಲಿ ಹುದುಗಿದ ಲಿಂಗಕ್ಕೆ
ಸದಮಲದ ಹೃದಯ ಮುಖಮಾಡಿ ॥ತೃಪ್ತಿಯ
ಒದಗಿ ಕೊಡುತಿಹನು ಚದುರೈಕ್ಯ
(ಅಅವಾ)

ಸಾಧಕನು ಈ ಚಕ್ರ ಜಾಗೃತಿಗಾಗಿ ಹೃದಯ ಕಮಲ ಶುದ್ಧವಾಗಿಟ್ಟುಕೊಂಡು, ಮಹಾಲಿಂಗವನ್ನು ನೆನೆದು ತೃಪ್ತಿಯನ್ನು ಪಡೆಯುತ್ತಾನೆ ಆಗ ಅವನು ಚತುರನಾಗಿ ಐಕ್ಯವನ್ನು ಗಳಿಸಿಕೊಳ್ಳುತ್ತಾನೆ. ಈ ಚಕ್ರ ಜಾಗೃತಿಗಾಗಿ 2 ಬಾರಿ ಓಂಕಾರ ಮಂತ್ರ ಪಠಿಸಬೇಕು.

7.ಸಹಸ್ರಾರ: ಹೀಗೆ ಈ ಆಜ್ಞಾ ಚಕ್ರದ ಶಕ್ತಿ ಜಾಗೃತಿಯಾಗಿ ಮುಂದೆ ಸಹಸ್ರಾರ ಚಕ್ರದ ಕಡೆ ಸಾಗಬೇಕು. ಈ ಸಹಸ್ರಾರ ಚಕ್ರ ಕಿರೀಟ ಚಕ್ರ ಇದು. ಇದಕ್ಕೆ ಕರ್ಮರೋಗಹರ ಚಕ್ರ ಎಂದು ಕರೆಯುತ್ತಾರೆ. ಇದು ನಮ್ಮ ದೇಹದ ಶಿರೋಮಣಿಯ ಅಂದರೆ ನಮ್ಮ ತಲೆಯ ನೆತ್ತಿಯ ಮೇಲಿರುವ ಪ್ರಧಾನ ಚಕ್ರ ಇದಾಗಿದೆ. ಇದು ತಲೆಯ ತುತ್ತತುದಿಗೆ ಇದೆ. ಮೆದುಳಿನ ಮೇಲೆ ಬ್ರಹ್ಮರಂಧ್ರದ ಬಳಿ ಇದ್ದು, ಇದು ಮೆದುಳಿನ ಪೀನಿಯಲ್ ಗ್ರಂಥಿಯೊಂದಿಗೆ ಸಂಬಂಧ ಹೊಂದಿದೆ. ಮನಸ್ಸಿಗೆ ಸಂಬಂಧಿಸಿದ್ದಾದ ಇದು, ಸಹಸ್ರದಳ ಕಮಲವಾಗಿದೆ. ಇದರ ಬಣ್ಣ ನೇರಳೆ ಆಗಿದೆ. ಇದು ಆಂತರಿಕ ಬುದ್ಧಿವಂತಿಕೆ ದೇಹದ ಸಾವು ಮೊದಲಾದ ವಿಷಯಗಳನ್ನು ಒಳಗೊಂಡಿದೆ. ಈ ಚಕ್ರ ಸಾಧನೆಯಿಂದ ಮನಸ್ಸು ಆನಂದಮಯವಾಗುತ್ತದೆ, ಪರಮಜ್ಞಾನಿಯೂ ಆಗಿ ಹೊರಹೊಮ್ಮುತ್ತಾನೆ. ಇದರಿಂದ ಶೋಕಮುಕ್ತರಾಗಬಹುದು ಮತ್ತು ಮಾನಸಿಕ ದೌರ್ಬಲ್ಯ ಓದು ಬರಹದಲ್ಲಿ ಹಿನ್ನಡೆಯಾಗುವ ಮಾನಸಿಕ ಕಾಯಿಲೆಯನ್ನು ಕಳೆದುಕೊಳ್ಳಬಹುದು. ಈ ಸಹಸ್ರಾರ ಚಕ್ರ 'ನಿಷ್ಕಲಲಿಂಗ' ಸ್ವರೂಪದ್ದಾಗಿದ್ದು, ಈ ಚಕ್ರ ಜಾಗೃತಿಗಾಗಿ ಮೊದ ಮೊದಲು 'ಬಂ'ಕಾರದ ಬೀಜಾಕ್ಷರ ಮಂತ್ರ ಉಚ್ಚಾರಣೆ ಮೂರು ಬಾರಿ ಮಾಡುತ್ತಾ ನಂತರದಲ್ಲಿ ಶಾಂತಸ್ವರೂಪಿಯಾಗಬೇಕು.

8.ಶಿಖಾ: ಈವರೆಗೆ ಸಾಧಕನು ಅರಿವು ಜ್ಞಾನ, ಜ್ಞೇಯ ಎಂಬುದಕ್ಕೆ ಒಳಗಾಗುತ್ತಾನೆ. ಮುಂದಿನ ಶಿಖಾಚಕ್ರದ ನಿರಂಜನಲಿಂಗ ಇಲ್ಲಿ ಪ್ರಾಣಲಿಂಗವು ಪ್ರಜ್ವಲಿಸಲು ಪ್ರಾರಂಭಿಸುತ್ತದೆ, ಈಗ ಸಾಧಕನು ಈ ಚಕ್ರದ ಜಾಗೃತಿಗಾಗಿ 'ಸಂ'ಕಾರದ ಬೀಜಾಕ್ಷರ ನಾದವನ್ನು ಮೂರು ಬಾರಿ ಪಠಿಸುತ್ತಾ ಮಂತ್ರಮುಗ್ಧನಾಗಬೇಕು.

9ಪಶ್ಚಿಮ: ಹಾಗೆಯೇ ಅಂತಿಮವಾಗಿ ನಮ್ಮ ತಲೆಯ ಹಿಂಭಾಗದಲ್ಲಿ ಪಶ್ಚಿಮ ಚಕ್ರ ಇದ್ದು, ಇಲ್ಲಿ ನಿಶೂನ್ಯ ಲಿಂಗ ಅಂದರೆ ಭಾವಲಿಂಗದಲ್ಲಿ ಐಕ್ಯ ಸ್ಥಿತಿಗೆ ತಲುಪಿ, ಸಾಧಕನು ತಾನೇ ತಾನಾಗುತ್ತಾನೆ. ಇದರ ಜಾಗೃತಿಗಾಗಿ ಸಾಧಕನು ಮೂರು ಬಾರಿ 'ವಂ'ಕಾರದ ಬೀಜಾಕ್ಷರ ಪಠಿಸಿ ಧ್ಯಾನಾಸಕ್ತನಾಗಬೇಕು.

ಈ ಕೊನೆಯ ಮೂರು ಚಕ್ರದ ಶಕ್ತಿಯ ಜಾಗೃತಿಯ ನಂತರ ಸಾಧಕನು ಪೂರ್ತಿಯಾಗಿ ಸಮಾಧಿ ಸ್ಥಿತಿಯಲ್ಲಿ ಧ್ಯಾನಾಸಕ್ತನಾಗಬೇಕು. ಈ ಮೂರು ಚಕ್ರ ಸಿದ್ದಿಗಾಗಿ, ಮನಸ್ಸನ್ನು ಲಿಂಗಧ್ಯಾನದಲ್ಲಿ ಕೇಂದ್ರಿಕರಿಸಬೇಕು. ಈಗ ಅಮೃತ ಸಿದ್ಧಿ ಪ್ರಾಪ್ತಿಯಾಗಲು ತೊಡಗುತ್ತದೆ. ಇದೇ ಕರುಣೋದಕ ಪ್ರಸಾದ. ಜಗತ್ತಿನಲ್ಲಿಯೇ ಇತ್ತೀಚಿನ ವೈಜ್ಞಾನಿಕ ಸಂಶೋಧನೆಯ ಮೂಲಕ ತಿಳಿದುಬರುವದೇನೆಂದರೆ, ಲಿಂಗಾಂಗಯೋಗ ಸಾಧನೆಯಲ್ಲಿ ತೊಡಗಿಸಿಕೊಂಡ ಸಾಧಕನ ಮಿದುಳಿನಲ್ಲಿ ಇರತಕ್ಕಂತಹ ಪೀನಿಯಲ್ ಗ್ರಂಥಿಯ 'ಮೆಲಾಟಿನ್' ಅನ್ನು ಸ್ರವಿಸಲು ಈ ಪೀನಿಯಲ್ ಗ್ರಂಥಿಯು ಕತ್ತಲೆಯಲ್ಲಿ ಕಾರ್ಯ ಪ್ರವೃತ್ತವಾಗಿರುತ್ತದೆ. ಅಲ್ಲದೆ ಅದರ ಸ್ರವಿಕೆ ಮೆಲಾಟಿನ್ ಕೂಡಾ ಕತ್ತಲಲ್ಲಿ ಮಧ್ಯರಾತ್ರಿ 2–5 ರವರೆಗೆ ಹೆಚ್ಚು ಪ್ರಮಾಣದಲ್ಲಿ ಸ್ರವಿಸುತ್ತದೆ. ಕಾರಣ ಈ ಮೆಲಾಟಿನ್‌ನಿಂದ ಆರೋಗ್ಯವನ್ನು ಆಯುಷ್ಯವನ್ನು ಪಡೆಯಲು ಸಾಧ್ಯವೆಂದು ವಿಜ್ಞಾನಿಗಳ ಅಭಿಪ್ರಾಯವಾಗಿದೆ. ಆದರೆ ಗುರು ಬಸವಾದಿ ಪ್ರಮಥರು ಇನ್ನೂ ಮುಂದೆ ಹೋಗಿ ಪೀನಿಯಲ್ ಗ್ರಂಥಿಯಿಂದ ಆ ಅಮೃತರಸವನ್ನು ಬಿಡಿಸುವ ವಿಧಾನವನ್ನು ತಿಳಿದು ಆಚರಿಸಿ ತೋರಿಸಿದ್ದಾರೆ. ಪೀನಿಯಲ್ ಗ್ರಂಥಿಗೆ ಶರಣರು ಪಶ್ಚಿಮ ಚಕ್ರವೆಂದು ಅಷ್ಟದಳ ಕಮಲದ ಆತ್ಮನೆಂದು ಸೂಚಿಸಿದ್ದಾರೆ. ಹಡಪದ ಅಪ್ಪಣ್ಣನವರ ಧರ್ಮಪತ್ನಿ ಲಿಂಗಮ್ಮನವರ ತಮ್ಮ ಲಿಂಗಾಂಗಯೋಗ ಸಿದ್ಧಿಯಿಂದ ಹೊರಹೊಮ್ಮಿದ ಅನುಭವದ ವಚನವನ್ನು ಇಲ್ಲಿ ಗಮನಿಸಬಹುದು.

ಆಧಾರವ ಬಲಿಯೆ ಬೇಗೆವರಿಯಿತ್ತು
ಕಿಚ್ಚು ಆವರಿಸಿ ಊರ್ಧ್ವಕ್ಕೇರಿತ್ತು.
ಸಾಸಿರದಳದ ಅಮೃತದ ಕೊಡ ಕಾಯಿತ್ತು
ಕಾಯ್ದ ಅಮೃತ ಉಕ್ಕಿ ತೊಟ್ಟಿಕ್ಕಿ
ಅಮೃತವನುಂಡು
ಹಸಿವು ಕೆಟ್ಟಿತ್ತು ತೃಷೆಯಡಗಿತ್ತು ನಿದ್ರೆಯರಿತ್ತಿತ್ತು;
ಅಂಗಗುಣವಳಿಯಿತ್ತು ಲಿಂಗಗುಣ ನಿಂದಿತ್ತು
ಸಂಗಸುಖ ಹಿಂಗಿತ್ತು.
ಅಂಗ ಲಿಂಗವೆಂಬ ಉಭಯವಳಿದು
ಮಂಗಳ ಮಹಾಬೆಳಗಿನಲ್ಲಿಯೆ ಓಲಾಡಿ
ಸುಖಿಯಾದೆನಯ್ಯಾ
ಅಪ್ಪಣ್ಣ ಪ್ರಿಯ ಚನ್ನಬಸವಣ್ಣ. (ಸವಸ)

ಹೀಗೆ ಲಿಂಗಾಂಗಯೋಗ ಸಾಧನೆ ಮಾಡುತ್ತಾ ದಿವ್ಯನುಭಾವದೊಂದಿಗೆ ಪರಮ ಗುರಿಯನ್ನು ಸಾಧಿಸುವುದೇ ಲಿಂಗಾಯತ ಧರ್ಮದ ಸಾಧನೆಯ ಲಕ್ಷಣವಾಗಿದೆ. ಇಂತಹ ಅದ್ಭುತ ಸಾಧನೆಯನ್ನು ನಾವು ಮಾಡಿ ಇನ್ನೊಬ್ಬರಿಗೂ ಕಲಿಸುತ್ತಾ ಲಿಂಗಾಯತ ಧರ್ಮವನ್ನು ಉಳಿಸೋಣ ಬೆಳೆಸೋಣ. ಆಧ್ಯಾತ್ಮಿಕ ಚೈತನ್ಯ ಶಕ್ತಿಯಿಂದ ದೇಶ, ವಿಶ್ವದ ಸಕಲ ಜೀವ ಜಂತುಗಳಿಗೆ ಲೇಸನೆ ಬಯಸೋಣ ಯೋಗ ಸಾಧನೆಯೇ ನಮ್ಮೆಲ್ಲರ ಪರಮ ಗುರಿ.

ಶರಣರೇ ಲಿಂಗಾಂಗ ಯೋಗ ಸಾಧನೆ 3 ಭಾಗ ಇಲ್ಲಿಗೆ ಮುಗಿದಿದ್ದು, ಲಿಂಗಾಂಗಯೋಗ ಸಾಧನೆಗೆ ಅಗತ್ಯವಾದ ಶ್ರೀ ಬಸವ ಪ್ರಭು ಸ್ವಾಮೀಜಿಯವರದೇ ಆದ ಈ ಲೇಖನ ಪ್ರಕಟಿಸಲಾಗಿದೆ.

*** ಓದುಗರಿಗೆ ವಿಶೇಷ ಸೂಚನೆ ***

ಶರಣ ಬಂಧುಗಳೆ ನೀವು ಉತ್ತಮ ಚಿಂತಕರು ಹಾಗೂ ಲೇಖಕರಾಗಿ ದ್ದಲ್ಲಿ ವಿಶೇಷ ಲೇಖನಗಳನ್ನು ಡಿಟಿಪಿ ಮಾಡಿ **basavakumàraswamiji@gmail.com** ಮೇಲ್ ಅಡ್ರೆಸ್‌ಗೆ ಲೇಖನಗಳನ್ನು ಕಳಿಸಬಹುದು.

ನಿಮ್ಮ ಕುಟುಂಬದಿಂದಲೂ ಶರಣರ ಹಬ್ಬಗಳಿಗೆ ಶುಭಾಶಯ ಕೋರಬಹುದು. ಕುಟುಂಬದ ಅಥವಾ ಒಬ್ಬರ ಫೋಟೋ ಕಳುಹಿಸದರೆ ನಿಮ್ಮ ಫೋಟೊ ವನ್ನು ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ

ಶ್ರೀ ಬಸವ ಕುಮಾರ ಸ್ವಾಮೀಜಿ
ಮೊ.9449588669.

ವಿಭೂತಿ

ಮಾನವನ ಶರೀರವು ಪಂಚಭೂತಗಳಿಂದಾಗಿದ್ದು, ಪಂಚವಿಂಶತಿ ತತ್ವಗಳನ್ನು ಒಳಗೊಂಡಿದೆ. ಇದರ ಜೊತೆಗೆ ಕರ್ಮತ್ರಯಗಳಾದ ಕಾರ್ಮಿಕಮಲ, ಆಣವಮಲ, ಮಾಯಾಮಲ ಇವು ಅನುಕ್ರಮವಾಗಿ ಸ್ಥೂಲ, ಸೂಕ್ಷ್ಮ, ಕಾರಣಗಳಿಗೆ ಅಂಟಿಕೊಂಡು ಪ್ರಾರಬ್ಧ, ಸಂಚಿತ, ಆಗಾಮಿ ಕರ್ಮಗಳಿಗೆ ಒಳಗಾಗುತ್ತದೆ. ಹೀಗೆ ಜನ್ಮ ಜನ್ಮಾಂತರದಿಂದ ಬಂದಿರುವ ಕರ್ಮತ್ರಯಗಳನ್ನು ಕಳೆದುಕೊಳ್ಳಲು. ಲಿಂಗಾಯತ ಧರ್ಮದಲ್ಲಿ ವಿಶೇಷ ಸಂಸ್ಕಾರವಾದ ಸ್ಥೂಲ ತನುವಿಗೆ ಇಷ್ಟಲಿಂಗ, ಸೂಕ್ಷ್ಮ ತನುವಿಗೆ ಪ್ರಾಣಲಿಂಗ, ಕಾರಣ ಶರೀರಕ್ಕೆ ಭಾವಲಿಂಗವನ್ನು ಸದ್ಗುರು ಕ್ರಿಯಾದೀಕ್ಷೆ, ವೇದಾದೀಕ್ಷೆ, ಮಂತ್ರದೀಕ್ಷೆ ಎಂಬ ತ್ರೈ ದೀಕ್ಷೆಯ ಮೂಲಕ ಶಿಷ್ಯನಿಗೆ ಅನುಗ್ರಹಿಸುತ್ತಾನೆ. ಒಂದು ವೇಳೆ ಅನಗ್ರಹ ಬಯಸುವ ವ್ಯಕ್ತಿಗೆ ಪೂರ್ವಭಾವಿ ಸಂಸ್ಕಾರ ಏನೂ ಇಲ್ಲದಿದ್ದರೆ, ಮೊದಲು ವಿಭೂತಿ ಧಾರಣೆ ಮಾಡಲು ಪ್ರೇರಣೆ ನೀಡುವನು. ನಂತರ ರುದ್ರಾಕ್ಷಿ ಧಾರಣೆಗೆ ಪ್ರೇರಣೆ ನೀಡುವನು. ಮಂತ್ರದೀಕ್ಷೆಯ ಮೂಲಕ ಜಪತಪ ಕಲಿಸುವನು. ಮುಮುಕ್ಷುವು ಪೂರ್ಣ ಆಸಕ್ತಿ ಹೊಂದುತ್ತಲೇ ಲಿಂಗಧಾರಣೆ ಮಾಡುವನು.

ಸಮುದ್ರದ ಸೌಂದರ್ಯ ಹೆಚ್ಚಿಸುವ ಅಲೆಗಳಂತೆ, ಸರೋವರದ ಸೌಂದರ್ಯ ಹೆಚ್ಚಿಸುವ ತಾವರೆಯಂತೆ, ಆಕಾಶದಲ್ಲಿ ಮಾಣಿಕ್ಯದಂತೆ ಹೊಳೆಯುತ್ತಿರುವ ಹುಣ್ಣಿಮೆ ಚಂದ್ರನಂತೆ, ವ್ಯಕ್ತಿಯ ಹಣೆಯ ಮೇಲೆ ಧರಿಸುವ ಶುಭ್ರ ಬಿಳಿಯ ಬಣ್ಣದ ವಿಭೂತಿಯ ಎಳೆಗಳು ಮುಖದ ಚೆಲುವನ್ನು ಹೆಚ್ಚಿಸುತ್ತವೆ. ಕೆಲವು ಲಾಂಛನಗಳು ಮುಖದ ಚೆಲುವಿಕೆ ಕೆಡಿಸಿ, ವಿಲಕ್ಷಣವಾಗಿ ಕಾಣಿಸುವಂತೆ ಮಾಡಿದರೆ, ವಿಭೂತಿ ಮುಖದ ಚೆಲುವನ್ನು ಹೆಚ್ಚಿಸುತ್ತದೆ. ಸಾತ್ವಿಕತೆಯನ್ನು ವರ್ಧಿಸುತ್ತದೆ; ಗಾಂಭೀರ್ಯ–ಗೌರವವನ್ನು ತಂದುಕೊಡುತ್ತದೆ. ನೋಡುಗನಲ್ಲಿ ಪೂಜ್ಯ

ಭಾವವನ್ನು ಉಂಟು ಮಾಡುತ್ತದೆ. ಹೀಗಾಗಿ ಗುರು ಬಸವಣ್ಣನವರು ಶರಣರ ಮುಖದ ತೇಜಸ್ಸನ್ನು, ಗಾಂಭೀರ್ಯವನ್ನು ಹೆಚ್ಚಿಸುವುದಕ್ಕಾಗಿ ಲಿಂಗದೇವನ ಶರಣರ ಹಣೆಗೆ ಶ್ರೀ ವಿಭೂತಿಯೇ ಶೃಂಗಾರ ಎಂದಿದ್ದಾರೆ.

ವಿಭೂತಿಯು ಆಕಳ ಸಗಣೆಯಿಂದ ಸಂಸ್ಕಾರಗೊಂಡಿರುವುದರಿಂದ ಹಲವಾರು ರೋಗಗಳನ್ನು ನಿಯಂತ್ರಿಸುವ ಶಕ್ತಿ ಹೊಂದಿದೆ ಮತ್ತು ಮಾನವನಿಗೆ ಬರಬಹುದಾದ ಲಗ್ನ, ವಿಘ್ನ, ದೋಷ-ದುರಿತ ಕರ್ಮವನ್ನು ಕಳೆಯುವಲ್ಲಿ ರೋಗ ನಿರೋಧಕದಂತೆ ಕಾರ್ಯಮಾಡುತ್ತದೆ. ಆದ್ದರಿಂದ ವಿಭೂತಿಯನ್ನು ಧರಿಸಿ ಮುನ್ನ ಮಾಡಿರುವಂತಹ ಪಾಪಗಳನ್ನು ಕಳೆದು ಕೊಳ್ಳಬಹುದೆಂದು ವಿಶ್ವಗುರು ಬಸವಣ್ಣನವರು ತಮ್ಮ ವಚನದಲ್ಲಿ ಹೀಗೆ ಪ್ರಸ್ತಾಪಿಸಿದ್ದಾರೆ.

ಮುನ್ನ ಮಾಡಿದ ಪಾಪವೆಂತು
ಹೋಹುದೆಂದು ಚಿಂತಿಸಬೇಡ
ಕಹಿ ಸೋರೆಯ ಕಾಯ ತಂದು
ವಿಭೂತಿಯ ತುಂಬಿದಡೆ ಸಿಹಿಯಾಗದೆ
ಮೂರು ದಿವಸಕ್ಕೆ?
ಹಲವು ಕಾಲ ಕೊಂದ ಸೊನೇಗಾರನ
ಕೈಯ ಕತ್ತಿಯದಡೇನು ಪರುಷ ಮುಟ್ಟಲಿಕೆ
ಹೊನ್ನಾಗದೆ ಅಯ್ಯಾ?
ಲಲಾಟದಲ್ಲಿ ವಿಭೂತಿಯ ಬರೆಯಲು ಪಾಪ
ಪಲ್ಲಟವಾಗದೆ,
ಕೂಡಲ ಸಂಗಮದೇವಾ? (ಸವಸ)

ಲಿಂಗಾಯತ ಧರ್ಮ ಮಾನವೀಯತೆಯಿಂದ ಮಿಡಿಯುವ ಧರ್ಮ. ದೀನ ದಲಿತರು, ಪಾಪಿ-ಪತಿತರನ್ನು ಕಂಡು ಮಮ್ಮಲ ಮರುಗುವ ಧರ್ಮ. ಅದು ಈ ವಚನದಲ್ಲಿ ಬಿಂಬಿತವಾಗಿದೆ. ವಿಭೂತಿ ತುಂಬಿದ ಸೋರೆಕಾಯಿ, ಪರುಷ ಮುಟ್ಟಿದ ಕತ್ತಿ ಇಂಥ ಜಡವಸ್ತುಗಳೇ ಪರಿವರ್ತನೆಯಾಗುವುದಾದರೆ, ಚೈತನ್ಯಾತ್ಮಕನಾದ ಜೀವಾತ್ಮ ದೈವೀಕರಣಗೊಳ್ಳುವುದಿಲ್ಲವೆ? ಎಂಬ ಗುರು ಬಸವಣ್ಣನವರ ಸಂದೇಶ ಅಕ್ಷರಶಹಃ ಸತ್ಯವಾದುದ್ದಾಗಿದೆ.

*** ಓದುಗರಿಗೆ ವಿಶೇಷ ಸೂಚನೆ ***

ಶರಣ ಬಂಧುಗಳೆ ನೀವು ಉತ್ತಮ ಚಿಂತಕರು ಹಾಗೂ ಲೇಖಕರಾಗಿದ್ದಲ್ಲಿ ವಿಶೇಷ ಲೇಖನಗಳನ್ನು basavakumaraswamiji@gmail.com ಮೇಲ್ ಅಡ್ರೆಸ್‌ಗೆ ಲೇಖನ ಕಳಿಸಬಹುದು.

ಚಿಂತನ-ಮಂಥನ

ನೀಡಿ ಧಾರ್ಮಿಕ ಅಲ್ಪ ಸಂಖ್ಯಾಂತರ ಸ್ಥಾನಮಾನ ಕೊಟ್ಟು ಮೀಸಲಾತಿಯನ್ನು ಕಾನೂನು ಬದ್ಧವಾಗಿ ಸವಲತ್ತುಗಳನ್ನು ಕೊಡುತ್ತಿರುವುದೋ ಅದೇ ಕಾರಣದಿಂದ ಎಲ್ಲ ಲಕ್ಷಣ ಹೊಂದಿದ ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಧಾರ್ಮಿಕ ಅಲ್ಪಸಂಖ್ಯಾಂತರ ಸ್ಥಾನ-ಮಾನ ಮತ್ತು ಕೋಡ್ ನಂಬರ್ ಒದಗಿಸಲು ಅತೀ ತೀವ್ರವಾದ ಹೋರಾಟವನ್ನು ಮಾಡಲು ಅನಿವಾರ್ಯ ಪರಿಸ್ಥಿತಿ ಒದಗಿ ಬಂದಿದೆ. ಅನೇಕ ಪೂಜ್ಯ ಪೀಠಾಧಿಪತಿಗಳು, ತತ್ವಜ್ಞಾನಿಗಳು, ವಿಚಾರವಾದಿಗಳು, ಸಾಹಿತಿಗಳು, ರಾಜಕಾರಣಿಗಳು ಹಾಗೂ 3-4 ಕೋಟಿ ಜನ ಕರ್ನಾಟಕ, ಮಹಾರಾಷ್ಟ್ರ, ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಗೋವಾ, ದೆಹಲಿ ಹಾಗೂ ಹೊರದೇಶದಲ್ಲಿರುವ ಲಿಂಗಾಯತ ಧಾರ್ಮಿಕ ಅನುಯಾಯಿಗಳು ಇದನ್ನು ಸರ್ವಸಮ್ಮತವಾಗಿ ಒಪ್ಪಿಕೊಂಡು ಒಂದು ತೀರ್ಮಾನಕ್ಕೆ ಬಂದಿದ್ದಾರೆಂಬುದು ನಮ್ಮ ಅನುಭವಕ್ಕೆ ಬಂದ ವಿಷಯ. ಈ ಲಿಂಗಾಯತ ಧರ್ಮಕ್ಕೆ ಸಂವಿಧಾನಾತ್ಮಕವಾಗಿ ಸ್ವತಂತ್ರ ಧರ್ಮ ಅಂತಾ ಮಾನ್ಯತೆ ನೀಡುವಂತೆ ಸೂಕ್ತ ಶಿಫಾರಸ್ಸು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಲು ಕರ್ನಾಟಕ ಸರ್ಕಾರದ ಗೌರವಾನ್ವಿತರಾದ ಸನ್ಮಾನ್ಯ ರಾಜ್ಯ ಪಾಲರಿಗೆ, ಮುಖ್ಯಮಂತ್ರಿಗಳಿಗೆ, ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಸಲ್ಲಿಸಲು ಪ್ರಯತ್ನಿಸೋಣ.



ರತನ್ ಟಾಟಾ ಹೇಳಿದ ಊಟದ ಪಾಠ

ಪುಟಾಣಿಗಳ ಪ್ರಪಂಚ

। ಪುನೀತ್ ಎಂ.ಜಿ.
(ಸಂಗ್ರಹ)

ವಿಶ್ವದ ಶ್ರೀಮಂತ ಉದ್ಯಮಿಗಳ ಪಟ್ಟಿಯಲ್ಲಿ ಕಾಣಿಸಿಕೊಳ್ಳುವ ಭಾರತದ ರತನ್ ಟಾಟಾ ಜರ್ಮನಿಯಲ್ಲಿ ತಮಗೆ ಎದುರಾದ ಒಂದು ಸನ್ನಿವೇಶವನ್ನು ಹೀಗೆ ಹಂಚಿಕೊಂಡಿದ್ದಾರೆ.
ಒಂದು ಸಾರಿ ನಾವು ಜರ್ಮನಿಗೆ ಹೋಗಿದ್ದೆವು. ಅದು ಪ್ರಪಂಚದ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಒಂದು.

ಹಂಬರ್ಗ್‌ನಲ್ಲಿ ಊಟ ಮಾಡಲು ಅಲ್ಲಿನ ಹೋಟೆಲ್‌ಗೆ ಹೋದಾಗ ಬಹಳ ಟೇಬಲ್ ಖಾಲಿ ಇದ್ದವು. ನಮಗೆ ಆಶ್ಚರ್ಯವಾಯಿತು. ಅಲ್ಲಿ ಎಲ್ಲರೂ ಒಂದು-ಎರಡು ಊಟ ತರಿಸಿಕೊಂಡು ಪ್ಲೇಟ್ ಪೂರ್ತಿ ಖಾಲಿ ಮಾಡಿ ಹೋಗುತ್ತಿದ್ದರು.

ಒಂದು ಮೂಲೆಯ ಟೇಬಲ್ ನಲ್ಲಿ ವೃದ್ಧರು ಒಂದೇ ಊಟ ತರಿಸಿಕೊಂಡು ಅದನ್ನು ಎಲ್ಲರೂ ಹಂಚಿಕೊಂಡು ತಿನ್ನುತ್ತಿದ್ದರು !. ನಮಗೆ 'ಶ್ರೀಮಂತ ದೇಶದಲ್ಲಿ ಹೀಗೆ ತಿನ್ನುತ್ತಿದ್ದಾರಲ್ಲ ' ಎನ್ನಿಸಿತು. ನಾವು ನಮ್ಮ ಸ್ಟೇಟಸ್‌ಗೆ ತಕ್ಕಂತೆ ತರತರಹದ ತಿನಿಸುಗಳನ್ನು ತರಿಸಿಕೊಂಡು ತಿಂದೆವು. ನಮ್ಮವರು ಕೆಲವು ತಿನಿಸುಗಳು ಇಷ್ಟವಾಲಿಲ್ಲವೆಂದು, ಜಾಸ್ತಿ ಆಯಿತೆಂದು ಆಹಾರವನ್ನು ಪ್ಲೇಟಿನಲ್ಲಿಯೇ ಬಿಟ್ಟರು.

ನಾವು ಅಲ್ಲಿಂದ ಹೊರಡುವ ಸಮಯದಲ್ಲಿ ವೃದ್ಧ ಮಹಿಳೆಯೊಬ್ಬರು ನಮ್ಮ ಬಳಿ ಬಂದು ಆಹಾರವನ್ನು ಹಾಗೆ ವೇಸ್ಟ್ ಮಾಡಬಾರದುಅದು ನಮ್ಮ ಆಹಾರ ಎಂದಳು. ನಮ್ಮವರು ಅದು ನಮ್ಮಿಷ್ಟ ಎಂದರು.

ತಕ್ಷಣ ಆಕೆ ಯಾರಿಗೋ ಫೋನ್ ಮಾಡಿದಳು. ನಂತರ ಪೊಲೀಸರು ಬಂದರು. ನಡೆದಿದ್ದನ್ನು ಕೇಳಿದರು. ನಮಗೆ 50 ಯೂರೋ ದಂಡ ಹಾಕಿದರು. ಮರುಮಾತನಾಡದೇ ಕಟ್ಟಿ ಬಂದೆವು. ಆಗ ಅವರು ಹೇಳಿದರು ಹಣ ನಿಮ್ಮದು ಅಷ್ಟೇ, ಇಲ್ಲಿಯ ಸಂಪನ್ಮೂಲಗಳಲ್ಲ, ಇನ್ನೊಬ್ಬರು ತಿನ್ನುವುದನ್ನು ನೀವು ಹಾಳು ಮಾಡಿದ್ದೀರಿ. ಆ ಮೂಲಕ ನೀವು ನಮ್ಮ ದೇಶದ ಸಂಪತ್ತನ್ನು ನಷ್ಟ ಮಾಡಿದ್ದೀರಿ. ದೇಶದ ಸಂಪತ್ತನ್ನು ನಷ್ಟ ಮಾಡುವ ಹಕ್ಕು ನಿಮಗಿಲ್ಲ ಎಂದು ತಿಳಿ ಹೇಳಿದರು.

ನಾವು ಮದುವೆ ಸಮಾರಂಭಗಳನ್ನು ಸ್ಟೇಟಸ್ ಎಂಬ ಹೆಸರಿನಲ್ಲಿ ಎಷ್ಟು ಆಡಂಬರದಿಂದ ಮಾಡುತ್ತೇವೆ.? ನಾವು ಸಾಧ್ಯವಾದಷ್ಟು ನಮಹೆ ಎಷ್ಟು ಅಗತ್ಯವಿದೆಯೋ ಅಷ್ಟನ್ನು ನಡಿಸಿಕೊಂಡು ಊಟ ಮಾಡೋಣ. ಏಕೆಂದರೆ ಅನ್ನಕ್ಕೆ ಅಮೂಲ್ಯವಾದ ಬೆಲೆ ಇದೆ. ಮೇಲೆ ಹೇಳಿದ ಸನ್ನಿವೇಶ ಇದು ನಮಗೆ ಒಂದು ಗುಣಪಾಠವಲ್ಲವೇ. ಇದರಿಂದ ನಾವು ಕಲಿಯೋಣ.!!

ಒತ್ತಡದಿಂದ ಅಸ್ವಸ್ಥತೆ PTSD

| ಪುನೀತ್ ಎಂ.ಜಿ.

ಮೂಲಲೇಖನ : ಶಂಕರ್ ಪಾಟೀಲ್

ವ್ಯಕ್ತಿಗಳು ಯಾವುದಾದರೂ ಭಯ ಉಂಟಾಗುವಂತಹ ಘಟನೆಗಳನ್ನು ಅನುಭವಿಸಿದ್ದರೆ ಅಥವಾ ಅದಕ್ಕೆ ಸಾಕ್ಷಿಯಾಗಿದ್ದರೆ ಅದರ ನೆನಪುಗಳು ಮತ್ತು ಆ ಹಿಂದಿನ ಘಟನೆಗಳು ಅವರಲ್ಲಿ ಯಾವಾಗಲೂ ಆತಂಕ ಮತ್ತು ಭಯವನ್ನು ಪ್ರಚೋದಿಸುತ್ತವೆ. ಈ ಘಟನೆಗಳು ಅನೇಕ ರೀತಿಯದ್ದಾಗಿರಬಹುದು. ಉದಾಹರಣೆಗೆ, ದೈಹಿಕ ಅಥವಾ ಲೈಂಗಿಕ ಹಲ್ಲೆ, ಗಂಭೀರ ಅಪಘಾತಗಳು, ನೈಸರ್ಗಿಕ ವಿಕೋಪಗಳು ಮುಂತಾದವಾಗಿರಬಹುದು. ಸೂಕ್ತ ಆರೈಕೆಯಿಂದ, ಕಾಲಕ್ರಮೇಣ ಜನರು ಇದರಿಂದ ಗುಣಮುಖರಾಗಿ ದೈನಂದಿನ ಜೀವನಕ್ಕೆ ಹೊಂದಿಕೊಂಡಿದ್ದಾರೆ.

ಹಿಂದಿನ ಘಟನೆಯ ಕೆಟ್ಟ ನೆನಪು ಕೆಲವು ಜನರಲ್ಲಿ ಹೆಚ್ಚಾಗಿ ಕಾಡತೊಡಗುತ್ತದೆ. ವ್ಯಕ್ತಿಗಳಿಗೆ ಆಘಾತದ ಘಟನೆಗಳ ಕುರಿತಾದ ನೆನಪುಗಳು ಆಗಾಗ ಮರುಕಳಿಸುವ ಕಾರಣದಿಂದಾಗಿ ಅವರಲ್ಲಿ ತೀವ್ರ ಆತಂಕ ಮತ್ತು ಭಯ ಕಂಡುಬರುತ್ತದೆ. ಹಾಗಾಗಿ ಅವರಿಗೆ ದೈನಂದಿನ ಚಟುವಟಿಕೆಗಳನ್ನು ನಿರ್ವಹಿಸಲು ಸಾಧ್ಯವಾಗದು. ಅಂತಹ ವ್ಯಕ್ತಿಗಳು ಆಘಾತದ ನಂತರದ ಒತ್ತಡದ ಅಸ್ವಸ್ಥತೆಯಿಂದ (post traumatic stress disorder-PTSD) ಬಳಲುತ್ತಿರುತ್ತಾರೆ.



ಪಿಟಿಎಸ್‌ಡಿಯ ಲಕ್ಷಣಗಳೇನು?


ಪಿಟಿಎಸ್‌ಡಿ ಸಮಸ್ಯೆ ಹೊಂದಿರುವ ವ್ಯಕ್ತಿ ತೀವ್ರ ಆತಂಕ ಹಾಗೂ ಭಯ ಅನುಭವಿಸುತ್ತಾನೆ. ಅವನಲ್ಲಿ ಕಂಡು ಬರುವ ಸಾಮಾನ್ಯ ಲಕ್ಷಣಗಳೆಂದರೆ

ಘಟನೆಯನ್ನು ಮತ್ತೆಮತ್ತೆ ಮೆಲಕು ಹಾಕುವುದು: ವ್ಯಕ್ತಿಗಳು ಹಿಂದಿನ ಆಘಾತಕಾರಿ ಘಟನೆಗಳ ಕುರಿತಾಗಿ ದುಃಸ್ವಪ್ನ ಕಾಣುವುದರಿಂದ ಮತ್ತು ಪದೆಪದೇ ನೆನಪು ಮಾಡಿಕೊಳ್ಳುವುದರಿಂದ ಆ ಆಘಾತವನ್ನು ಕಲ್ಪಿಸಿಕೊಂಡು ಮಾನಸಿಕ ಹಿಂಸೆ ಅನುಭವಿಸುತ್ತಾರೆ. ಇದು ಅವರಲ್ಲಿ ಬೆವರುವಿಕೆ, ಹೃದಯ ಬಡಿತದಲ್ಲಿನ ಹೆಚ್ಚಳ, ವಾಕರಿಕೆ ಮತ್ತು ಹೃದಯಾಘಾತ ಮುಂತಾಗಿ ಅನೇಕ ದೈಹಿಕ ಪ್ರತಿಕ್ರಿಯೆಗಳನ್ನು ಉಂಟುಮಾಡಬಹುದು.

ತಲೆ ತಪ್ಪಿಸಿಕೊಳ್ಳುವುದು: ವ್ಯಕ್ತಿಗಳು ಆಘಾತಗಳ ಕುರಿತಾಗಿ ಮಾತನಾಡಲು, ಆ ಸ್ಥಳಗಳಿಗೆ ಭೇಟಿ ನೀಡಲು, ಅಂತಹ ಸನ್ನಿವೇಶಗಳನ್ನು ಎದುರಿಸಲು ಹಿಂದೇಟು ಹಾಕುತ್ತಾರೆ. ಅವುಗಳಿಂದಾಗಿ ಹಿಂದಿನ ಘಟನೆಗಳ ನೆನಪು ಮರುಕಳಿಸಿ ಭಯ ಹಾಗೂ ತೊಂದರೆ ಉಂಟಾಗಬಹುದೆಂದು ತಿಳಿಯುತ್ತಾರೆ.

ಅತಿ ಜಾಗರೂಕತೆ: ಅಂತಹ ವ್ಯಕ್ತಿಗಳು ನಿರಂತರವಾಗಿ ಜಾಗರೂಕತೆಯಿಂದಿರುತ್ತಾರೆ. ಸುರಕ್ಷತೆಯ ವಾತಾವರಣದಲ್ಲಿದ್ದರೂ ಯಾವಾಗಲೂ ಅಪಾಯವನ್ನು ಎದುರು ನೋಡುತ್ತಿರುತ್ತಾರೆ. ಅವರು ನೆಮ್ಮದಿಯಿಂದ ನಿದ್ರಿಸಲಾರರು.

ಭಾವನಾತ್ಮಕವಾಗಿ ದೂರವಾಗುತ್ತಾರೆ: ಅವರು ಸ್ನೇಹಿತರಿಂದ ಹಾಗೂ ಕುಟುಂಬದವರಿಂದ ದೂರವಿರಲು ಆರಂಭಿಸುತ್ತಾರೆ. ತಾವು ಖುಷಿ ಪಡೆಯುತ್ತಿದ್ದ ಚಟುವಟಿಕೆಗಳಲ್ಲಿಯೂ ಆಸಕ್ತಿ ಕಳೆದುಕೊಳ್ಳುತ್ತಾರೆ. ಖಿನ್ನತೆ, ತೀವ್ರ ತೆರನಾದ ಆತಂಕ, ಮಾದಕ ವಸ್ತುಗಳ ಚಟ ಮತ್ತು ಕೆಲವು ಸಂದರ್ಭಗಳಲ್ಲಿ ಆತ್ಮಹತ್ಯೆಯ ಆಲೋಚನೆಯಂತಹ ಮಾನಸಿಕ ಅನಾರೋಗ್ಯಗಳಿಗೂ ಒಳಗಾಗಬಹುದು.



ಕಾರಣಗಳೇನು?

ಜೀವಕ್ಕೆ ಅಪಾಯವಾಗಬಹುದಾದ ದೈಹಿಕ ಅಥವಾ ಲೈಂಗಿಕ ಹಿಂಸೆಗಳಂತಹ ಘಟನೆಗಳನ್ನು ಅನುಭವಿಸಿದ ಅಥವಾ ನೋಡಿದ ಯಾವುದೇ ವ್ಯಕ್ತಿಗಳು ಪಿಟಿಎಸ್‌ಡಿಗೆ ಒಳಗಾಗಬಹುದು. ಹುಟ್ಟುತ್ತಲೇ ಆತಂಕ ಅಥವಾ ಖಿನ್ನತೆಯ ಅಪಾಯಕ್ಕೆ ಒಳಗಾದ ವ್ಯಕ್ತಿಗಳಲ್ಲಿ ಇದು ಸುಲಭವಾಗಿ ಗೋಚರಿಸಬಹುದು. ಕೆಲವು ಸಂದರ್ಭಗಳಲ್ಲಿ, ಮಿದುಳು ಒತ್ತಡವನ್ನು ಹೇಗೆ ನಿಭಾಯಿಸುತ್ತದೆ ಎನ್ನುವುದು ಕೂಡ ಪರಿಣಾಮ ಬೀರುವ ಸಾಧ್ಯತೆಯಿದೆ. ಪಿಟಿಎಸ್‌ಡಿ ಉಂಟಾಗಲು ಯಾವುದೇ ಒಂದು ನಿರ್ದಿಷ್ಟ ಕಾರಣ ಅಂತಿಲ್ಲ, ಅದು ಅನೇಕ ಸಂಕೀರ್ಣ ಕಾರಣಗಳನ್ನು ಒಳಗೊಂಡಿರುತ್ತದೆ.

ನಿರ್ವಹಣೆ:

ಪಿಟಿಎಸ್‌ಡಿಯ ಲಕ್ಷಣಗಳು ಕಂಡುಬಂದರೆ ತಕ್ಷಣ ಮಾನಸಿಕ ಆರೋಗ್ಯ ತಜ್ಞರನ್ನು ಭೇಟಿ ಮಾಡಬೇಕು. ಚಿಕಿತ್ಸೆಯು ಹೆಚ್ಚು ಪರಿಣಾಮಕಾರಿಯಾಗಿರುವುದರಿಂದ ನೀವು ಎಷ್ಟು ಬೇಗ ಸಹಾಯವನ್ನು ಪಡೆದುಕೊಳ್ಳುವಿರೋ ಅಷ್ಟು ಬೇಗ ಚೇತರಿಸಿಕೊಳ್ಳಲು ಸಹಾಯವಾಗುತ್ತದೆ. ವಿಶ್ರಾಂತಿ, ವ್ಯಾಯಾಮ ಮತ್ತು ಆರೋಗ್ಯಕರ ಆಹಾರ ಕ್ರಮಗಳನ್ನು ರೂಢಿಸಿಕೊಳ್ಳುವ ಮೂಲಕ ಆತಂಕ ಕಡಿಮೆಗೊಳಿಸಿಕೊಳ್ಳಬಹುದು.

ಚಿಕಿತ್ಸಾ ವಿಧಾನ

ಆಘಾತದ ಅನುಭವವಾದ ತಕ್ಷಣದಲ್ಲಿ ಪಿಟಿಎಸ್‌ಡಿಯ ಲಕ್ಷಣಗಳು ಗೋಚರಿಸುವುದು ಸಹಜ. ಹೆಚ್ಚಿನ ಜನರು ಕುಟುಂಬ ಹಾಗೂ ಸ್ನೇಹಿತರ ಸಹಾಯದಿಂದ ಈ ತೊಂದರೆಯಿಂದ ಹೊರಬರುತ್ತಾರೆ. ಆಘಾತದ ನಂತರದಲ್ಲಿಯೂ ಇದರ ಲಕ್ಷಣಗಳು ದೀರ್ಘ ಕಾಲದವರೆಗೆ ಕಂಡುಬಂದಲ್ಲಿ ನೀವು ಮಾನಸಿಕ ತಜ್ಞರನ್ನು ಭೇಟಿ ಮಾಡುವುದು ಅಗತ್ಯ. ಪಿಟಿಎಸ್‌ಡಿಯ ಚಿಕಿತ್ಸೆ ಪ್ರಾಥಮಿಕವಾಗಿ ಥೆರಪಿಯನ್ನು, ಮುಖ್ಯವಾಗಿ ಕಾಗ್ನಿಟಿವ್ ಬಿಹೇವಿಯರಲ ಥೆರಪಿ (cognitive behavioral therapy-CBT) ಮತ್ತು ಎಕ್ಸ್‌ಪೋಶರ್ ಥೆರಪಿ(exposure therapy)ಯನ್ನು ಒಳಗೊಳ್ಳುತ್ತದೆ. ಈ ಸಂದರ್ಭದಲ್ಲಿ ವ್ಯಕ್ತಿಗಳು ತಾನನುಭವಿಸಿದ ಆಘಾತಕರ ಘಟನಾವಳಿಯ ಕುರಿತು ವಿಚಾರಮಾಡುವಂತೆ ಪ್ರಚೋದಿಸಲಾಗುತ್ತದೆ. ಕಳವಳಕ್ಕೆ ಕಾರಣವಾಗುವ ಈ ವಿಚಾರಗಳು ಮೂಡಿಬರದಂತೆ ವ್ಯಕ್ತಿಯು ಸಾಮಾನ್ಯವಾಗಿ ಪ್ರಯತ್ನಿಸುತ್ತಿರುತ್ತಾನೆ. ಚಿಕಿತ್ಸಾ ವಿಧಾನದಲ್ಲಿ ಪದೆಪದೇ ಈ ರೀತಿಯ ವಿಚಾರಗಳು ಉಂಟಾಗುವಂತೆ ಮಾಡುವುದರಿಂದ ಕಳವಳ ಕಡಿಮೆಯಾಗತೊಡಗುತ್ತದೆ.



ಕ್ರಮ ಸಂಖ್ಯೆ	ವಾರ	ದಿನಾಂಕ	ಊರುಗಳು
01.	ಮಂಗಳ (ಬಸವ)ವಾರ	01-11-2016	ವಿಜಯಪುರ
02.	ಬುಧ (ಚನ್ನ)ವಾರ	02-11-2016	ಬಸವ ಗಂಗೋತ್ರಿ
03.	ಗುರು (ಪ್ರಭು)ವಾರ	03-11-2016	ಮೈಸೂರು
04.	ಶುಕ್ರ(ಮಾತೃ)ವಾರ	04-11-2016	ನಂಜನಗೂಡು
05.	ಶನಿ(ಶರಣ)ವಾರ	05-11-2016	ಚಿಕ್ಕಮಗಳೂರು
06.	ಭಾನು(ದೇವ)ವಾರ	06-11-2016	ಚಿಕ್ಕಮಗಳೂರು
07.	ಸೋಮ(ಶಿವ)ವಾರ	07-11-2016	ಚಿಕ್ಕಮಗಳೂರು
08.	ಮಂಗಳ (ಬಸವ)ವಾರ	08-11-2016	ಭದ್ರಾವತಿ
09.	ಬುಧ (ಚನ್ನ)ವಾರ	09-11-2016	ಭದ್ರಾವತಿ
10.	ಗುರು (ಪ್ರಭು)ವಾರ	10-11-2016	ಶಿವಮೊಗ್ಗ
11.	ಶುಕ್ರ(ಮಾತೃ)ವಾರ	11-11-2016	ಶಿವಮೊಗ್ಗ
12.	ಶನಿ(ಶರಣ)ವಾರ	12-11-2016	ದಾವಣಗೆರೆ
13.	ಭಾನು(ದೇವ)ವಾರ	13-11-2016	ಚಿತ್ರದುರ್ಗ
14.	ಸೋಮ(ಶಿವ)ವಾರ	14-11-2016	ಚಳ್ಳಕೆರೆ
15.	ಮಂಗಳ(ಬಸವ)ವಾರ	15-11-2016	ದೊಡ್ಡಉಳ್ಳಾರ್ತಿ
16.	ಬುಧ (ಚನ್ನ)ವಾರ	16-11-2016	ದಾಸರ್ಲಹಳ್ಳಿ
17.	ಗುರು (ಪ್ರಭು)ವಾರ	17-11-2016	ಕೆ.ಡಿ ಕೋಟೆ
18.	ಶುಕ್ರ(ಮಾತೃ)ವಾರ	18-11-2016	ಚಿತ್ರನಾಯಕನಹಳ್ಳಿ
19.	ಶನಿ(ಶರಣ)ವಾರ	19-11-2016	ಘಟಪರ್ತಿ
20.	ಭಾನು(ದೇವ)ವಾರ	20-11-2016	ತಿಮ್ಮಪ್ಪಯ್ಯನಹಳ್ಳಿ
21.	ಸೋಮ(ಶಿವ)ವಾರ	21-11-2016	ಅಂದ್ರಾಳು
22.	ಮಂಗಳ(ಬಸವ)ವಾರ	22-11-2016	ಬಳ್ಳಾರಿ
23.	ಬುಧ (ಚನ್ನ)ವಾರ	23-11-2016	ಬಳ್ಳಾರಿ
24.	ಗುರು (ಪ್ರಭು)ವಾರ	24-11-2016	ಸಿರುಗುಪ್ಪ
25.	ಶುಕ್ರ(ಮಾತೃ)ವಾರ	25-11-2016	ಗಂಗಾವತಿ
26.	ಶನಿ(ಶರಣ)ವಾರ	26-11-2016	ಕೊಪ್ಪಳ
27.	ಭಾನು(ದೇವ)ವಾರ	27-11-2016	ಕೊಪ್ಪಳ
28.	ಸೋಮ(ಶಿವ)ವಾರ	28-11-2016	ಶರಣಗ್ರಾಮ ಗುಳೇ
29.	ಮಂಗಳ(ಬಸವ)ವಾರ	29-11-2016	ಕುಸುಗಲ್
30.	ಬುಧ (ಚನ್ನ)ವಾರ	30-11-2016	ಹುಬ್ಬಳ್ಳಿ
31.	ಗುರು (ಪ್ರಭು)ವಾರ	01-12-2016	ಮುಮ್ಮಿಗಟ್ಟಿ
32.	ಶುಕ್ರ(ಮಾತೃ)ವಾರ	02-12-2016	ಕಿತ್ತೂರು ಸುತ್ತಮುತ್ತ
33.	ಶನಿ(ಶರಣ)ವಾರ	03-12-2016	ಕಿತ್ತೂರು ಸುತ್ತಮುತ್ತ
34.	ಭಾನು(ದೇವ)ವಾರ	04-12-2016	ಕಿತ್ತೂರು ಸುತ್ತಮುತ್ತ
35.	ಸೋಮ(ಶಿವ)ವಾರ	05-12-2016	ಧಾರವಾಡ

ಕ್ರಮ ಸಂಖ್ಯೆ	ವಾರ	ದಿನಾಂಕ	ಊರುಗಳು
36.	ಮಂಗಳ(ಬಸವ)ವಾರ	06-12-2016	ವಕ್ಕುಂದ
37.	ಬುಧ (ಚನ್ನ)ವಾರ	07-12-2016	ಬೈಲಹೊಂಗಲ
38.	ಗುರು (ಪ್ರಭು)ವಾರ	08-12-2016	ಬೈಲಹೊಂಗಲ
39.	ಶುಕ್ರ(ಮಾತೃ)ವಾರ	09-12-2016	ಬೆಳಗಾಂ
40.	ಶನಿ(ಶರಣ)ವಾರ	10-12-2016	ಬೆಳಗಾಂ
41.	ಭಾನು(ದೇವ)ವಾರ	11-12-2016	ಸಂಕೇಶ್ವರ
42.	ಸೋಮ(ಶಿವ)ವಾರ	12-12-2016	ಗಡಿಹಿಂಗ್ಲಾಜ್
43.	ಮಂಗಳ(ಬಸವ)ವಾರ	13-12-2016	ಗೋಕಾಕ್
44.	ಬುಧ (ಚನ್ನ)ವಾರ	14-12-2016	ಗೋಕಾಕ್
45.	ಗುರು (ಪ್ರಭು)ವಾರ	15-12-2016	ಗೋಕಾಕ್
46.	ಶುಕ್ರ(ಮಾತೃ)ವಾರ	16-12-2016	ಗೋಕಾಕ್
47.	ಶನಿ(ಶರಣ)ವಾರ	17-12-2016	ಶೇಗುಣಸಿ
48.	ಭಾನು(ದೇವ)ವಾರ	18-12-2016	ಖಿವಟಕೊಪ್ಪ
49.	ಸೋಮ(ಶಿವ)ವಾರ	19-12-2016	ತಾಂವಶಿ
50.	ಮಂಗಳ(ಬಸವ)ವಾರ	20-12-2016	ಅಥಣಿ
51.	ಬುಧ (ಚನ್ನ)ವಾರ	21-12-2016	ಕನಮಡಿ
52.	ಗುರು (ಪ್ರಭು)ವಾರ	22-12-2016	ಚಡಚಣ
53.	ಶುಕ್ರ(ಮಾತೃ)ವಾರ	23-12-2016	ಬಿಜಾಪುರ
54.	ಶನಿ(ಶರಣ)ವಾರ	24-12-2016	ಮಾರ್ಕಬ್ಬಿನಹಳ್ಳಿ
55.	ಭಾನು(ದೇವ)ವಾರ	25-12-2016	ಗುಲಬರ್ಗಾ(ನೃಪತುಂಗನಗರ)
56.	ಸೋಮ(ಶಿವ)ವಾರ	26-12-2016	ಗುಲಬರ್ಗಾ(ಮಹಾಂತೇಶ)
57.	ಮಂಗಳ(ಬಸವ)ವಾರ	27-12-2016	ಯಲಮಾಮಿಡಿ
58.	ಬುಧ (ಚನ್ನ)ವಾರ	28-12-2016	ಉದಗೀರ್
59.	ಗುರು (ಪ್ರಭು)ವಾರ	29-12-2016	ಕಮಲನಗರ
60.	ಶುಕ್ರ(ಮಾತೃ)ವಾರ	30-12-2016	ಬೀದರ್
61.	ಶನಿ(ಶರಣ)ವಾರ	31-12-2016	ಜಹೀರಾಬಾದ್
62.	ಭಾನು(ದೇವ)ವಾರ	01-01-2017	ಹೈದ್ರಾಬಾದ್
63.	ಸೋಮ(ಶಿವ)ವಾರ	02-01-2017	ಹೈದ್ರಾಬಾದ್
64.	ಮಂಗಳ(ಬಸವ)ವಾರ	03-01-2017	ಹೈದ್ರಾಬಾದ್
65.	ಬುಧ (ಚನ್ನ)ವಾರ	04-01-2017	ಹೈದ್ರಾಬಾದ್
66	ಗುರು(ಪ್ರಭು)ವಾರ	05-01-2017	ಹೈದ್ರಾಬಾದ್
67.	ಶುಕ್ರ(ಮಾತೃ)ವಾರ	06-01-2017	ಹೈದ್ರಾಬಾದ್
68.	ಶನಿ(ಶರಣ)ವಾರ	07-01-2017	ಹೈದ್ರಾಬಾದ್
69.	ಭಾನು(ದೇವ)ವಾರ	08-01-2017	ಹೈದ್ರಾಬಾದ್
70.	ಸೋಮ(ಶಿವ)ವಾರ	09-01-2017	ಹೈದ್ರಾಬಾದ್
71.	ಮಂಗಳ(ಬಸವ)ವಾರ	10-01-2017	ಕೂಡಲ ಸಂಗಮಕ್ಕೆ ಪ್ರಯಾಣ



111 ಅಡಿ ಎತ್ತರದ ಬಸವ ಪುತ್ಥಳಿ

ಬೆಂಗಳೂರು-ಮೈಸೂರು ಹೆದ್ದಾರಿಯ ಮೇಲಿರುವ ಕುಂಬಳಗೋಡಿನ ಬಸವ ಗಂಗೋತ್ರಿಯಲ್ಲಿ

ಬೆಂಗಳೂರಿನಿಂದ ಮೈಸೂರು ಹೆದ್ದಾರಿಯ ಮೇಲೆ 20 ಕಿಲೋಮೀಟರ್ ದೂರದಲ್ಲಿ ವಿಶ್ವಕಲ್ಯಾಣ ಮಿಷನ್ ಒಡೆತನದ 'ಬಸವ ಗಂಗೋತ್ರಿ' ಎಂಬ ಆಶ್ರಮವಿದೆ. ಇಲ್ಲಿ ಚಿನ್ಮಯಜ್ಞಾನಿ ಚನ್ನಬಸವಣ್ಣನವರ ಹೆಸರಿನ ಜ್ಞಾನಪೀಠವೂ ಸ್ಥಾಪನೆಯಾಗಿ ಇದಕ್ಕೆ ಪೂಜ್ಯ ಶ್ರೀ ಜಗದ್ಗುರು ಚೆನ್ನಬ[illegible] ಸ್ವಾಮಿಗಳು ಪೀಠಾಧಿಪತಿಗಳಾಗಿದ್ದಾರೆ. ಇಲ್ಲಿ ಅನಾಥಾಲಯ ಮತ್ತು ವೃದ್ಧಾಶ್ರಮಗಳು ನಡೆಯುತ್ತಲಿವೆ. ತೆಂಗಿನ ತೋಟದೊಡನೆ ಸುಂದರವಾದ ಪರಿಸರ ಹೊಂದಿರುವ ಬಸವ ಗಂಗೋತ್ರಿಯಲ್ಲಿ ಗುರು ಬಸವಣ್ಣನವರ ಬೃಹತ್ ಪುತ್ಥಳಿ ಆಗಬೇಕೆಂದು ವಿಶ್ವಕಲ್ಯಾಣ ಮಿಷನ್ ಚೇರ್ಮನ್ನರಾದ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಅಪೇಕ್ಷಿಸಿದ್ದರು. ಆದ್ದರಿಂದ 111 ಅಡಿ ಬೃಹತ್ ಪುತ್ಥಳಿಗೆ ಶಂಕುಸ್ಥಾಪನೆ ಸಹ ಮಾಡಲಾಗಿದೆ. ಮಟ್ಟಸವಾದ ಬಯಲಿನಲ್ಲಿ ಮಾಡಬೇಕಾಗಿರುವುದರಿಂದ 6 ಮೆಟ್ಟಿಲಿನ 30 ಅಡಿ ಎತ್ತರದ ಪೀಠವನ್ನು ಮಾಡಿ ಅದರ ಮೇಲೆ ಇಷ್ಟಲಿಂಗ ಪೂಜೆ-ತ್ರಾಟಕ ಯೋಗದಲ್ಲಿ ನಿರತ ಗುರು ಬಸವಣ್ಣನವರನ್ನು ರೂಪಿಸಲಾಗುವುದು.

ಪೀಠದ ಕೆಳಭಾಗದಲ್ಲಿ ಒಂದು ಧ್ಯಾನ ಮಂಟಪವನ್ನು ಮತ್ತು ಸಪ್ತ ಗಣಾಧೀಶರ ಮೂರ್ತಿಗಳು ಸಹಿತವಾದ ಶರಣ ಮಂಟಪವನ್ನು- ಹೀಗೆ 3 ಅಂತಸ್ತಿನ ಕಟ್ಟಡವನ್ನು ನಿರ್ಮಿಸಲಾಗುವುದು. ಮೂರ್ತಿಯ ಸುತ್ತಲೂ ಷಡ್‌ಗಣಾಧೀಶರಾದ ಶೂನ್ಯ ಪೀಠಾಧೀಶ ಅಲ್ಲಮಪ್ರಭುದೇವರು, ಚಿನ್ಮಯಜ್ಞಾನಿ ಚನ್ನಬಸವಣ್ಣ, ಲಿಂಗಾಂಗಯೋಗಿ ಸಿದ್ಧರಾಮೇಶ್ವರ, ವೀರವಿರಾಗಿಣಿ ಅಕ್ಕಮಹಾದೇವಿ, ವೀರ ಮಾತೆ ಅಕ್ಕನಾಗಲಾಂಬಿಕೆ, ವೀರ ಗಣಾಚಾರಿ ಮಡಿವಾಳ ಮಾಚಿದೇವರ ಗವಿಗಳನ್ನು ಗೋಳಾಕಾರದಲ್ಲಿ ನಿರ್ಮಿಸಲಾಗುವುದು. ಮೂರ್ತಿಯ ಸುತ್ತಲೂ ಶರಣೋದ್ಯಾನವನ್ನು ನಿರ್ಮಿಸಲಾಗುವುದು. ಧರ್ಮಪಿತ ಬಸವಣ್ಣನವರ ತತ್ತ್ವಗಳ ಪ್ರಚಾರ ಮಾಡಲು ಬೃಹತ್ ಸ್ಮಾರಕಗಳು ಸಾಧಕವಾಗುತ್ತವೆಂಬ ಮನೀಷೆಯಿಂದ ಈ ಬೃಹತ್ ಪುತ್ಥಳಿಯನ್ನು ನಿರ್ಮಿಸಲಾಗುತ್ತಿದೆ. ಬಸವ ಗಂಗೋತ್ರಿಯಲ್ಲಿ ನಡೆಯುತ್ತಿರುವ ಅನಾಥಾಲಯ, ವೃದ್ಧಾಶ್ರಮಗಳಿಗೆ ಸ್ವತಂತ್ರವಾದ ಕಟ್ಟಡ ಆಗಬೇಕಾಗಿದೆ. ಆದ್ದರಿಂದ ಈ ಎಲ್ಲ ಕೆಲಸಗಳಿಗೆ ಉದಾರವಾದ ಧನಸಹಾಯದ ಅಗತ್ಯವಿದೆ.

ಬಸವ ಗಂಗೋತ್ರಿಯ ಕೆಲಸಗಳು ವಿಶ್ವಕಲ್ಯಾಣ ಮಿಷನ್ ಸಂಸ್ಥೆಯಿಂದ ನಡೆಯುತ್ತಿದ್ದು ಇದಕ್ಕೆ 80ಜಿ ಇನ್‌ಕಂ ಟ್ಯಾಕ್ಸ್ ಸೌಲಭ್ಯವಿದೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:

✠ ಪೂಜ್ಯ ಶ್ರೀ ಜಗದ್ಗುರು ಡಾ.ಮಾತೆ ಮಹಾದೇವಿ ಬಸವ ಮಂಟಪ ರಾಜಾಜಿನಗರ, ಬೆಂಗಳೂರು-560 010. 9448137508, 9449588669







ಬಸವಕಲ್ಯಾಣ ಕಲ್ಯಾಣ ಪರ್ವದ ಸುಮಧುರ ಕ್ಷಣಗಳು